ಹಾಗೂ ಮುಖ್ಯ ಕಾರ್ಯದರ್ಶಿಯವರಿಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲರಿಗೂ ನೇರವಾಗಿ ಪತ್ರ ಬರೆದು ಶ್ರೀ ಜನಾರ್ಧನ್ ರವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಒತ್ತಾಯಿಸುತ್ತಿದ್ದಾರೆ.

ಶ್ರೀಮತಿ ಮೇರಿಕುಟ್ಟಿ ಮ್ಯಾಥ್ಯೂಸ್ ಅಲಿಯಾಸ್ ತಂಗಮ್ಮ ಇವರನ್ನು ಜನಾರ್ಧನ್‌ರವರು ಮದುವೆಯಾಗಿರುತ್ತಾರೆ. ಇಬ್ಬರು ಹೆಂಡತಿಯರನ್ನು ಮದುವೆಯಾಗಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಸಿ.ಓ.ಡಿ ಪತ್ರದ ಪ್ರಕಾರ ಶ್ರೀಮತಿ ಮೇರಿಕುಟ್ಟಿ ಮ್ಯಾಥ್ಯೂಸ್ ಅಲಿಯಾಸ್ ಶ್ರೀಮತಿ ತಂಗಮ್ಮ ಜನಾರ್ಧನ್ ಎಂಬ ಹೆಸರು ಒಬ್ಬರದೇ ಹೆಸರಾಗಿರುತ್ತದೆ. ಅವರಿಗೆ ಇಬ್ಬರು ಹೆಂಡತಿಯರು ಇರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿರ್ದೇಶನಾಲಯದಲ್ಲಿ ಯಾವುದೇ ಫೈಲನ್ನು ಮುಚ್ಚಿಟ್ಟಿರುವುದಿಲ್ಲ. ವಿಚಾರಣೆಯಲ್ಲಿ ಸದರಿನೌಕರರು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಕಾನೂನು ರೀತಿಯಲ್ಲಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ನಾವು ಎತ್ತಿದ 2-3 ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ನಾವು ಬಹಳ ಮಹತ್ವದ ವಿಚಾರಗಳನ್ನು ಹೇಳಿದ್ದೇವೆ. ಕನ್ನಡ ಅನುಷ್ಠಾನದ ಬಗ್ಗೆ ವಾಟಾಳ್ ನಾಗರಾಜ್ ಅವರು ಮತ್ತು ನಂಜುಂಡ ಸ್ವಾಮಿಯವರು ಹೇಳಿದ್ದಾರೆ. ಆಶ್ರಯ ಯೋಜನೆ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಪೊಲೀಸ್ ಲಾಕ್‌ಅಪ್ ಡೆತ್ ಬಗ್ಗೆ ಪೊಲೀಸರು ಮಾಡುತ್ತಿರತಕ್ಕ ಅನ್ಯಾಯದ ಬಗ್ಗೆ, ದುರಾಡಳಿತದ ಬಗ್ಗೆ ನಾವು ಪ್ರಶ್ನೆ ಎತ್ತಿದ್ದೇವೆ. ಇದರ ಬಗ್ಗೆ ತಾವು ನಮಗೆ ರಕ್ಷಣೆ ಕೊಡುತ್ತೀರೆಂದು ಸಂಪೂರ್ಣವಾಗಿ ನಂಬಿದ್ದೇವೆ. ಮುಖ್ಯ ಮಂತ್ರಿಗಳನ್ನು ಕರೆಸಿ ನಮಗೆ ಉತ್ತರ ಕೊಡಿಸತಕ್ಕ ಕರುಣೆ ತೋರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :- ಮುಂಜಾನೆ ನಾನು ಪ್ರಾರ್ಥನೆ ಮಾಡಿದಾಗ ಮುಖ್ಯಮಂತ್ರಿಗಳು ಇಲ್ಲವೆಂದುಹೇಳಿದರು. ಸದನದ ಕಲಾಪದಲ್ಲಿ ಅಡ್ಡಿ ಬರಬಾರದೆಂದು ನಾವು ಅಡ್ಡಿ ಬರುತ್ತಿಲ್ಲ. ಇದನ್ನು ಮುಖ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಮಹತ್ವದ ವಿಷಯವನ್ನು ರೈಸ್ ಮಾಡಿದಾಗ ಯಾರಿಗಾದರೂ ಉತ್ತರ ನೀಡಲು ತಾವು ಹೇಳಬೇಕು. ಇದೇ ಪ್ರಕಾರ ಸರ್ಕಾರ ನಡೆದರೆ ಯಾವ ರೀತಿಯಲ್ಲಿ ಸರ್ಕಾರಕ್ಕೆ ಗೌರವ ಸಿಗುತ್ತದೆ? ಆಶ್ರಯ ಯೋಜನೆ ಬಗ್ಗೆ ಇಂಟರೀಮ್ ರಿಪೋರ್ಟ್ ಇದೆ. ಇಂಟರೀಮ್ ರಿಪೋರ್ಟ್ ಇದ್ದರೆ ಅದನ್ನು ಹಾಜರ್ಪಡಿಸಬೇಕು, ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ನೀಡಬೇಕು ಮತ್ತು ಸ್ಟೇಟ್‌ಮೆಂಟ್ ಮಾಡಿಸಬೇಕೆಂದು ಹೇಳಿದ್ದೇವೆ. ಅದು ಆಗಬೇಕು. ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತರುವ ಬಗ್ಗೆ ಹೇಳಿದ್ದೇವೆ. ಅದು ಬಹಳ ಮಹತ್ವದ ವಿಷಯ ಇದೆ. ಯಾವುದೇ ವಿಷಯಕ್ಕೆ ಉತ್ತರ ಕೊಡದಿದ್ದರೆ ಒನ್ ವೇ ಟ್ರಾಫಿಕ್ ಆಗುತ್ತದೆ. ನಾವು ಸುಮ್ಮನೆ ಹೇಳುತ್ತಾ ಹೋಗುವುದು ಆದರೆ ಯಾವುದಕ್ಕೂ ಉತ್ತರ ದೊರೆಯುವುದಿಲ್ಲ. ಇದರಿಂದ ನಮ್ಮ ಮೇಲೆ ಏನು ಪರಿಣಾಮವಾಗುತ್ತದೆ?

ಅಧ್ಯಕ್ಷರು :- ಮುಖ್ಯಮಂತ್ರಿಗಳನ್ನು ಆದಷ್ಟು ತೀವ್ರವಾಗಿ ಕರೆಸುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

1993ರ ಕರ್ನಾಟಕ ಪಂಚಾಯತ್ ರಾಜ್ಯ ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ಪಂಚಾಯತ್‌ರಾಜ್ಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ :- ನಾನು ಇದರ ಬಗ್ಗೆ ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು :- ಬಿಲ್ ಬಗ್ಗೆ ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ :- ನಾನು ಬಹಳ ನೋವಿನಿಂದ ಕೊನೆಯದಾಗಿ ಮಾತನಾಡಬೇಕೆಂದು ಮಾಡಿದ್ದೆ. ಈ ಸರ್ಕಾರವಾಗಲಿ, ನಾವಾಗಲಿ, ನಾವು ಅಳವಡಿಸಿಕೊಂಡಿರುವ ನಿಯಮಗಳನ್ನು ಪಾಲನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಾವು ಇಲ್ಲಿ ಕೇವಲ ಶೂನ್ಯವೇಳೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿ ಬರೀ ಪ್ರಚಾರ ಗಿಟ್ಟಿಸಿಕೊಳ್ಳಬೇಕೆಂದು ಬಂದಿಲ್ಲ. ಅದಕ್ಕಿಂತ ಹೆಚ್ಚಾಗಿ ತಾವು ಬೆಳಿಗ್ಗೆ ವಾಟಾಳ್ ನಾಗರಾಜ್ ಮತ್ತಿತರ ಸದಸ್ಯರು ನಿಯಮಬಾಹಿರವಾದ ಕೆಲಸ ಮಾಡಿದರು ಎಂದು ಏನು ಕಠಿಣವಾದ ಕ್ರಮ ತೆಗೆದುಕೊಂಡಿರಿ ಅದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಅದಕ್ಕಿಂತ ಕಠಿಣವಾದ ಕ್ರಮವನ್ನು ಸರ್ಕಾರದ ವಿರುದ್ಧವು ಸಹ ತೆಗೆದುಕೊಳ್ಳುವ ಮೂಲಕ ನಮಗೆ ಕೆಲಸ ಮಾಡುವುದಕ್ಕೆ ನೀವು ಸಹಾಯ ಮಾಡಬೇಕಾಗುತ್ತದೆ. ಹಾಗೂ ರಕ್ಷಣೆ ಕೊಡಬೇಕಾಗುತ್ತದೆ. ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂದು ತಾವು ತೀರ್ಮಾನ ಮಾಡುವುದಾದರೆ ನಾನು ವೈಯಕ್ತಿಕವಾಗಿ ಹೇಳುತ್ತೇನೆ. ನಾವು ಈ ಸಭೆಯಲ್ಲಿ ಭಾಗವಹಿಸುವುದಕ್ಕೆ ಸಿದ್ಧರಿಲ್ಲ. ನಾವು ಆ ನಿಯಮಗಳನ್ನು ಹರಿದುಹಾಕಿ ಹೋಗಬೇಕೆ ಅಥವಾ ಬೇರೆಯವರು ಮಾಡಿದ ಹಾಗೆ ಸುಟ್ಟು ಹಾಕಿ ಕೂಗಬೇಕೆ? ಅದನ್ನು ತಾವು ಹೇಳಬೇಕು. ಅದಕ್ಕಿಂತ ಹೆಚ್ಚಾಗಿ ನಾನು ಹೇಳುತ್ತೇನೆ. ಇವತ್ತಿನ ದಿವಸ ಬಹಳ ಮುಖ್ಯವಾಗಿ ನಮ್ಮ ಎಲ್ಲ ಪಕ್ಷದ ಸದಸ್ಯರು ಒಪ್ಪಿದ್ದಾರೆ; ಬಹಳ ವಿಶೇಷವಾದ ಒಂದು ವಿಧೇಯಕವನ್ನು ತಾವು ಮಂಡಿಸುತ್ತಿದ್ದೀರಿ ಎಂದು ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ವಿಧೇಯಕದ ಪ್ರತಿಯನ್ನು ನಮಗೆ ಒದಗಿಸುವುದಕ್ಕೆ ಸಾಧ್ಯವಿಲ್ಲವೇ? ಒದಗಿಸಬೇಕಲ್ಲವೇ? ಇಂಥ ವಿಧೇಯಕದ ಪ್ರತಿಗಳನ್ನು ನಮಗೆ ಒದಗಿಸದೆ ನಮಗಿರತಕ್ಕ ಹಕ್ಕನ್ನು ಮೊಟಕು ಮಾಡುವುದಾದರೆ ನಾವು ಈ ಸದನದ ಸದಸ್ಯರಾಗಿ ಮುಂದುವರೆಯಬೇಕೆ? ತಮಗೆ ಗೊತ್ತಿದೆ, ನಿಯಮ 80ರ ಪ್ರಕಾರ ಯಾವುದೇ ಒಂದು ವಿಧೇಯಕವನ್ನು ಮಂಡಿಸಬೇಕಾದರೆ ನಮಗೆ ಅಧಿಕಾರ ಕೊಟ್ಟಿದ್ದೀರಿ. ಆ ವಿಧೇಯಕ ಕೆಲವು ವಿಚಾರದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿದ್ದರೆ ಅಥವಾ ಈ ಒಂದು ಸದನದ ವ್ಯಾಪ್ತಿಗೆ ಮೀರಿದಂಥ ವಿಧೇಯಕವಾಗಿದ್ದರೆ ಅದನ್ನು ವಿರೋದ ಮಾಡುವ ಹಕ್ಕನ್ನು ನಮಗೆ ಕೊಟ್ಟಿದ್ದೀರಿ. ಆ ಹಕ್ಕನ್ನು ನಾವು ಚಲಾಯಿಸಬೇಕಾದರೆ ಕನಿಷ್ಠ ಪಕ್ಷ ವಿಧೇಯಕದ ಪ್ರತಿಯನ್ನಾದರೂ ಅವರು ನಮಗೆ ಕೊಡಬೇಕೆ ಅಥವಾ ಬೇಡವೆ? ಪ್ರತಿಯನ್ನು ಕೊಡದೆ ವಿಧೇಯಕವನ್ನು ಮಂಡಿಸುವುದು ಸರಿಯಲ್ಲ. ನಾನು ತಮ್ಮಲ್ಲಿ ನಮ್ರವಾಗಿ ವಿನಂತಿಸುತ್ತಿದ್ದೇನೆ. ನಿಜವಾಗಿ ನಾವು ವಿರೋಧಪಕ್ಷದ ಸದಸ್ಯರಾಗಿ ಕೆಲಸ ಮಾಡಬೇಕಾದರೆ ಕೇವಲ ಸರ್ಕಾರದ ವಸೂಲಿ ಬಾಜಿಯಿಂದ ಕೆಲಸ ಮಾಡಿಸಿಕೊಳ್ಳುವುದಕ್ಕೆ ನಾವು ಬಂದಿಲ್ಲ. ಅದಕ್ಕಿಂತ ಹೆಚ್ಚಾಗಿ ನಾವು ಸರ್ಕಾರ ಎಲ್ಲಿ ತಪ್ಪು ಮಾಡುತ್ತಿದೆ ಜನತೆಯ ಹಿತದೃಷ್ಟಿಯಿಂದ ಏನು ಚರ್ಚೆ ಮಾಡಬೇಕು ಅದರ ಬಗ್ಗೆ ಭಾವನೆಗಳನ್ನು ಹೇಳುವುದಕ್ಕೆ ಬಂದಿದ್ದೇವೆಯೇ ಹೊರತು ಕೇವಲ ಸರ್ಕಾರದ ಅಥವಾ ಮಂತ್ರಿಗಳನ್ನು ವಸೂಲಿ ಬಾಜಿ ಮಾಡಿ ನಮ್ಮ ಕೆಲಸ ಮಾಡಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ನಾವು ಇಲ್ಲಿಗೆ ಬಂದಿಲ್ಲ. ನಮ್ಮ ವಿರೋಧ ಪಕ್ಷದ ಸದಸ್ಯರು ಏನು ಕೆಲಸ ಮಾಡಬೇಕಾಗಿದೆ. ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಮಾಡದಿದ್ದರೆ ಅದಕ್ಕೆ ಬೇಕಾದ ರಕ್ಷಣೆಯನ್ನು ತಾವು ಕೊಡುವುದಿಲ್ಲವೆಂದರೆ ನಾವು ಏತಕ್ಕೆ ಸದಸ್ಯರಾಗಿ ಮುಂದುವರಿಯಬೇಕು? ನಿಯಮ 80ರಲ್ಲಿ ಏನಿದೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

See 80. (1) "On the motion for leave to introduce a Bill, the mover may make a brief explanatory statement. If the motion is opposed, the Speaker may permit a brief explanatory statement from the member who opposes".

ಏಕೆ ಸ್ವಾಮಿ ನನಗೆ ಆ ಒಂದು ಅವಕಾಶವನ್ನು ಕೊಡುವುದಿಲ್ಲ ? ಏತಕ್ಕೋಸ್ಕರ ಅಂತಹ ಅಧಿಕಾರವನ್ನು ಮೊಟಕು ಮಾಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ? ಇದರ ಉದ್ದೇಶ ಏನು? ಈ ಶಾಸನಸಭೆಯಲ್ಲಿ ನಾವು ಯಾರೂ ಸಹ ಅವರು ನಿಯಮ ಬಾಹಿರವಾಗಿ ಕೆಲಸ ಮಾಡಿದರೂ ಸಹ ನಾವು ಅದನ್ನು ಒಪ್ಪಿಕೊಂಡು ತೆಪ್ಪಗಿದ್ದರೆ ಮಾತ್ರ ನಾವು ಸರ್ಕಾರದ ಪರವಾಗಿ ಇದ್ದೇವೆ ಎಂದು ಜನರು ನಮ್ಮನ್ನು ಭಾವಿಸಿದರೆ ಅದಕ್ಕಿಂತ ಅಪಾಯಕಾರಿಯಾದ, ಜನತಂತ್ರ ವ್ಯವಸ್ಥೆಯ ವಿರುದ್ಧವಾದಂಥ ಬೇರೆ ಕೆಲಸ ಇದೆಯಾ ? ಏತಕ್ಕೋಸ್ಕರ ಮಾಡುತ್ತಿಲ್ಲ ? ಇದೊಂದೇ ಅಲ್ಲ ಅನೇಕ ಸಾರಿ ಈ ಸಂದರ್ಭದಲ್ಲಿ ಹೇಳಿದರೂ ಸಹ ನಿಜ ಇಲ್ಲ ನಾವು ಏನು ನಿಯಮಗಳನ್ನು ಮಾಡಿಕೊಂಡಿದ್ದೇವೆ, ಅದಕ್ಕೆ ವಿರುದ್ಧವಾಗಿ ಸರ್ಕಾರ ವರ್ತನೆ ಮಾಡಿದಾಗ, ಇದರ ಬಗ್ಗೆ ಅಂತಿಮ ತೀರ್ಮಾನ ನಿಮ್ಮದು. ಅದನ್ನು ಪ್ರಶ್ನೆ ಮಾಡುವಂಥ ಅಧಿಕಾರ ನನಗೆ ಇಲ್ಲ, ಮತ್ತು ನಮಗೂ ಸಹ ಈ ಒಂದು ಪ್ರಶ್ನೆಯನ್ನು ಹೊರಗಡೆ ಚರ್ಚೆ ಮಾಡುವಂಥ ಅಧಿಕಾರವನ್ನು ಸಂವಿಧಾನ ಪ್ರಕಾರ ಬಹಳ ಮಹತ್ವವಾದುದ್ದು. ಅದು ಕಿತ್ತುಕೊಂಡಿದ್ದೀರಿ, ಅಂತಹ ಸಂದರ್ಭದಲ್ಲಿ ನಮಗೆ ರಕ್ಷಣೆ ಕೊಡಬೇಕಾದದ್ದು ತಮಗೆ ಸೇರಿದ್ದು. ತಾವು ಸಹ ಈ ಒಂದು ಕೆಲಸವನ್ನು ಮಾಡದಿದ್ದರೆ ನಾವು ಇನ್ನು ಎಲ್ಲಿಗೆ ಹೋಗಬೇಕು ? ಇದರ ಅರ್ಥ ಏನಾಗುತ್ತದೆ ಎಂದರೆ, ನಾವು ಯಾರೂ ಇಲ್ಲ ಕೆಲಸ ಮಾಡುವ ಅವಶ್ಯಕತೆ ಇಲ್ಲವೆಂದು ಆಗುತ್ತದೆ. ಕೆಲಸ ಮಾಡುವುದಾದರೆ ಸರ್ಕಾರದ ದಾಕ್ಷಿಣ್ಯಕ್ಕೆ ಅನುಗುಣವಾಗಿ ಕೆಲಸ ಮಾಡಬೇಕು ಅಂತಾದರೆ ಇಲ್ಲಿ ವಿರೋಧ ಪಕ್ಷದ ಸದಸ್ಯರು ಅವಶ್ಯಕತೆ ಇಲ್ಲವೆಂದು ಆಗುತ್ತದೆ. ತಾವು ಹೇಳಿದರೆ ನಾವಂತೂ ಇನ್ನು ಮೇಲೆ ಭಾಗವಹಿಸುವುದಿಲ್ಲ, ಚರ್ಚೆ, ಮಾಡುವುದಿಲ್ಲ, ನೀವು ಹೇಳಿದ ಹಾಗೆ ನಾವು ಹಾಗೆಯೇ ಎದ್ದುಹೋಗುತ್ತೇವೆ. ಅವರು ಪ್ರತಿಷ್ಠೆಯಲ್ಲಿದ್ದಾರೆ. ಇಲ್ಲಿಯವರೆಗೂ ಸಹ ಪ್ರತಿಷ್ಠೆಯನ್ನು ಕೊಡುವಂಥ ಸೌಜನ್ಯ ಸರ್ಕಾರಕ್ಕೆ ಇಲ್ಲ. ಯಾವ ಪುಸ್ತಕದಲ್ಲಿ ಇಂಟ್ರೊಡ್ಯುಸ್ ಮಾಡಿದ ಮೇಲೆ ಕೊಡಬೇಕೆಂದು ಇದೆ ? ಇದನ್ನು ಏನು ಪ್ರಿಂಟ್ ಮಾಡಿದ್ದಾರೆ, ಅದನ್ನು ಕನಿಷ್ಠ ಪಕ್ಷ ಎರಡು ದಿವಸ ಮೊದಲೇ ಕೊಡಬೇಕೆಂದು ಇದೆ ಪಾರ್ಲಿಮೆಂಟ್‌ನಲ್ಲಿ ಏಳು ದಿವಸ ನೋಟೀಸ್ ಕೊಡಬೇಕೆಂದು ಇದೆ. ಏತಕ್ಕೆ ಎಂದರೆ ನಮಗೆ ಆ ವಿಧೇಯಕವನ್ನು ಸಂವಿಧಾನಾತ್ಮಕವಾಗಿ ವಿರೋಧ ಮಾಡುವಂಥ ಹಕ್ಕು ಇರುವುದರಿಂದ ನಮ್ಮ ಹಕ್ಕನ್ನು ಚಲಾಯಿಸುವುದಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಪಾರ್ಲಿಮೆಂಟಿನಲ್ಲಿ ಈ ಕೆಲಸ ಮಾಡಿದ್ದಾರೆ. ಆ ಸಂಪ್ರದಾಯವನ್ನು ನಾವು ಅನುಸರಿಸುತ್ತಿದ್ದೇವೆ. ಕೇವಲ ಈ ವಿಧೇಯಕಕ್ಕೆ ಮಾತ್ರ ನಾನು ಹೇಳುತ್ತಿಲ್ಲ. ಇಡೀ ವ್ಯವಸ್ಥೆ ಹಾಗೆ ಇದೆ. ನಾವು ಯಾರೂ ಕೆಲಸ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಮಾಡಿದರೂ ಕೂಡ ಸರ್ಕಾರದ ದಾಕ್ಷಿಣ್ಯಕ್ಕೆ ಅನುಗುಣವಾಗಿ ಮಾಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ನಾವು ಭಾಗಿಯಾಗಬೇಕೇ? ತಾವು ಹೇಳಬೇಕು ನಾನು ಪಾರ್ಲಿಮೆಂಟಿನದ್ದನ್ನು ಓದುತ್ತೇನೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

"A Bill is not included in the list of business it shall not be included in the next day's list of business for introduction until copies of bills are made available atleast 2 days before the day on which it is proposed to be introduced.

ಇದು ಏತಕ್ಕೋಸ್ಕರ ಪಾರ್ಲಿಮೆಂಟಿನಲ್ಲಿ ಬಂತು ಎಂದರೆ, ಅಂತಹದ್ದೆ ಒಂದು ಹಕ್ಕು ಪಾರ್ಲಿಮೆಂಟಿನಲ್ಲಿತ್ತು. ಈ ಪಾರ್ಲಿಮೆಂಟಿನಲ್ಲಿ ಬಂದಿತ್ತು. ಯಾವ ಸದಸ್ಯರಿಗೆ ಇದನ್ನು ವಿರೋಧ ಮಾಡುವ ಅಧಿಕಾರ ಇದೆ, ಅವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅವರು ಹೇಳುತ್ತಾರೆ.

On this there was direction issued by the Speaker in the Parliament. It says:

The parctice was to circulate copies of bills to the Members after their introduction in the House although few copies were kept in the lobby at

the time of introduction for the information of the Members. Since the provision existed under Rule 72 for any Member to oppose a motion for leave to introduce the bill, a demand was made now and then that the Bills for introduction should be circulated in advance so that the members might be aware of the contents of the bill at the time of voting on the motion for the introduction.

ಸನ್ಮಾನ್ಯ ಅಧ್ಯಕ್ಷರೇ, ಇಲ್ಲೂ ಸಹ ನಮಗೆ ಅಂಥಾದ್ದೇ ಒಂದು ಹಕ್ಕನ್ನು ತಾವು ಕೊಟ್ಟೀದ್ದೀರಿ, ನಿಯಮ 80 ರ ಪ್ರಕಾರ ನಾನು ಅದನ್ನು ಸಹ ತಮ್ಮ ಗಮನಕ್ಕೆ ತರುತ್ತಿದ್ದೇನೆ.

If the motion is opposed, the Speaker may permit a brief explanatory statement from the member who opposes and a brief replay from the mover, and shall then without further debate put the questions thereon.

Provided that where a motion is opposed on the ground that the Bill initiates legislation outside the legislative competence of the House the Speaker may permit a full discussion thereon.,

ಇಂತಹ ಕಾನೂನು ತಿದ್ದುಪಡಿಯಾಗುತ್ತಿರುವಾಗ, ಇದನ್ನು ಸದನದ ಸದಸ್ಯರಿಗೆ , ನಿಯಮದ ಪ್ರಕಾರ ಮುಂಚಿತವಾಗಿ ಕೊಡದೇ ಹೋದರೆ, ಮತ್ತು ಈ ಬಗ್ಗೆ ಸದಸ್ಯರಿಗಿರತಕ್ಕ ಹಕ್ಕನ್ನು ಚಲಾಯಿಸುವಂಥ ರೀತಿಯಲ್ಲಿ ಅವಕಾಶವನ್ನು ಮಾಡಿ ಕೊಡದೇ ಹೋದರೆ, ನಾವು ಏತಕ್ಕೋಸ್ಕರ ಈ ಮನೆಯಲ್ಲಿ ಸದಸ್ಯರಾಗಿ ಮುಂದುವರಿಯಬೇಕು ? ಮತ್ತು ಸದಸ್ಯರು ಏತಕ್ಕೋಸ್ಕರ ಚರ್ಚೆಯಲ್ಲಿ ಭಾಗವಹಿಸಬೇಕು ? ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೂ ಆಕಾಶ ಕಳಚಿ ಬೀಳುವುದಿಲ್ಲ. ಈ ಕಾನೂನು ಎಷ್ಟು ಮಟ್ಟಿಗೆ ಮಾಡುತ್ತೀರೋ ಗೊತ್ತಿಲ್ಲ. ಇವತ್ತಿನ ದಿವಸ, ತಾವು ಗ್ರಾಮಾಭಿವೃದ್ಧಿ ಸಚಿವರಿಗೆ, ತಿದ್ದುಪಡಿಯನ್ನು ಮಂಡಿಸುವುದಕ್ಕೆ ಅವಕಾಶ ಕೊಡಬಾರದು. ಇದರ ಪ್ರತಿಗಳನ್ನು ಎಲ್ಲಾ ಸದಸ್ಯರಿಗೂ ಕೊಡಬೇಕು. ಆ ರೀತಿ ಕೊಟ್ಟ ನಂತರ, ನಾಡಿದ್ದು ಅಂದರೆ, ಸೋಮವಾರ ಇದರ ಮಂಡನೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :-ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ಏನು ಪಾಯಿಂಟ್ ರೈಸ್ ಮಾಡಿದ್ದಾರೆ. ಅದಕ್ಕೆ ಸಂಪೂರ್ಣವಾದ ಬೆಂಬಲ ಕೊಡುತ್ತೇನೆ. ಏಕೆಂದರೆ, ಇದು ಬಹಳ ಮಹತ್ವದ ಬಿಲ್. ತಮಗೆ ಗೊತ್ತು, ಕಲಾಪ ಸಲಹಾ ಸಮಿತಿಯಲ್ಲಿ ಚರ್ಚೆಯಾದಾಗ, ಮಾನ್ಯ ಘೋರ್ಪಡೆಯವರು ಅಭಿಪ್ರಾಯ ಕೊಟ್ಟು, ಮುಂಚೆಯೆ ಬಿಲ್ ಪ್ರತಿಗಳನ್ನು ಕೊಡುತ್ತೇನೆ. ಹರಿಬಿರಿಯಲ್ಲಿ ಪಾಸ್ ಮಾಡುವ ಉದ್ದೇಶ ಇಲ್ಲ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಲ್ಲಿ ನಿಮ್ಮ ಉದ್ದೇಶವನ್ನು ನಾವು ಪ್ರಶ್ನೆ ಮಾಡುತ್ತಾ ಇಲ್ಲ. ಪ್ರಶ್ನೆ ಏನೆಂದರೆ ರೂಲ್ 80 ರ ಪ್ರಕಾರ ಬಹಳ ಕ್ಲಿಯರ್ ಇದೆ "Without circulating the Bill among the Memebrs" - introduce -ಮಾಡುವುದಕ್ಕೆ ಬರುವುದಿಲ್ಲ. It is very clear ...."Kaul & Shakder " ಓದಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಎರಡು ದಿನ ಮುಂಚಿತವಾಗಿಯೇ ಬಿಲ್ ಕೊಡಬೇಕಾಗುತ್ತದೆ. ಹಾಗಾಗಿ ನೀವು ಮಾಡಿದ ಲ್ಯಾಪ್ಸ್‌ಗೆ, ನಾವು ಪ್ರೊಟೆಕ್ಷನ್ ಮಾಡುವುದಕ್ಕೆ ಬರುವುದಿಲ್ಲ. ಇದೇನು ಹೊಸ ಪದ್ಧತಿ ಅಲ್ಲ. ಇವತ್ತು ಎಲ್ಲಿಂದ ಲ್ಯಾಪ್ಸ್ ಆಗಿದೆ ಎನ್ನುವುದನ್ನು ಸರ್ಕಾರ ಹೇಳಬೇಕು. ನಾನು ಈ ಬಿಲ್ ಪ್ರಾಮುಖ್ಯತೆ ಬಗ್ಗೆ ಹೇಳುತ್ತಾ ಇಲ್ಲ. ಈ ವ್ಯವಸ್ಥೆಯಲ್ಲಿ ನಮಗೆ ವಿಶ್ವಾಸ ಇದೆ. ನಾವೇ ಈ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ತಾವು ಈಗ ತಿದ್ದುಪಡಿಯನ್ನು ಮಾತ್ರ ತರುತ್ತಿದ್ದೀರಿ. ಇಡೀ ದೇಶಕ್ಕೆ ಮಾದರಿಯಾದ ವ್ಯವಸ್ಥೆಯನ್ನು ತಂದಿದ್ದೇವೆ. ಈ ತಿದ್ದುಪಡಿ ಬಗ್ಗೆ ಚರ್ಚೆ ಮಾಡಬೇಕು. ಆದರೆ, ಇವತ್ತು ನಿಮಗೆ ಇಂಟ್ರಡ್ಯೂಸ್ ಮಾಡುವುದಕ್ಕೆ

ಬರುವುದಿಲ್ಲ.We oppose it..... ನಾನು ತಮಗೆ ವಿನಯದಿಂದ ಹೇಳುತ್ತೇನೆ. ತಾವು ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಸರ್ಕಾರಕ್ಕೆ ಛೀಮಾರಿ ಹಾಕಬೇಕಾಗುತ್ತದೆ. ನಿನ್ನೆ ಮಧ್ಯದಲ್ಲಿ ಇಂಟ್ರಡ್ಯೂಸ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ನಾವು ಹೇಳಿದೆವು ಸಪ್ಲಿಮೆಂಟರಿ ಅಜೆಂಡಾ ತನ್ನಿ ಎಂದು, ಅದನ್ನೂ ತರಲಿಲ್ಲ. ಇವತ್ತು ಅಜೆಂಡಾದಲ್ಲಿ ತರುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಆದರೆ ಈ ಬಿಲ್ ಎಲ್ಲರಿಗೂ ಸರ್ಕ್ಯುಲೇಟ್ ಆಗಿಲ್ಲ. ಇದರ ಬಗ್ಗೆ ವಾದ ವಿವಾದದ ಪ್ರಶ್ನೆ ಇಲ್ಲ. ಅವರೂ ಸಹ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನಿಂಚಾಶವನ್ನು ಅವರೂ ಒಪ್ಪಿ, ಇವತ್ತು ಬಿಲ್ ಇಂಟ್ರಡ್ಯೂಸ್ ಮಾಡುವುದು ಬೇಡ. ಈಗಾಗಲೇ ಅವರು ಹೇಳಿದ ಹಾಗೆ, ಮೊದಲು ಸದಸ್ಯರಿಗೆ ಕಳುಹಿಸಿ, ನಂತರ ಸೋಮವಾರ ಇದು ಇಂಟ್ರಡ್ಯೂಸ್ ಆಗಲಿ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ಎತ್ತಿರುವಂಥ ಪ್ರಶ್ನೆ ಬಹಳ ಮುಖ್ಯವಾದುದು. ಕಾರಣ ಇಷ್ಟೇ. ಸಂವಿಧಾನಕ್ಕೆ ವಿರುದ್ಧವಾಗಿ ಮಸೂದೆ ಏನಾದರೂ ಮಂಡನೆ ಆಗುತ್ತಾ ಇದ್ದರೆ, ಅದು ಮಂಡನೆಗೆ ಮುಂಚೆಯೇ ಅದರ ಬಗ್ಗೆ ಎಚ್ಚರಿಕೆ ಕೊಡುವಂಥ ಕರ್ತವ್ಯ ನಮ್ಮದು ಇದ್ದೇ ಇದೆ. ಇಲ್ಲದೇ ಹೋದರೆ, ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಏನಾಗುತ್ತದೆ, ಹಾಗೆಯೇ ನೀವು ಮಂಡಿಸಿ ನಂತರ ಅದನ್ನು ಚರ್ಚೆಗೆ ತೆಗೆದುಕೊಂಡರೆ, ಬಹುಮತದ ಆಧಾರದ ಮೇಲೆ ಪಾಸ್ ಆಗುತ್ತದೆ. ಅನಂತರ ನ್ಯಾಯಾಲಯಕ್ಕೆ ಹೋಗುತ್ತದೆ. ಈಗ ನೀವೇನು ಮಂಡಿಸುತ್ತಿದ್ದೀರಿ, ಇದು ಮುಖ್ಯವಾದ ಮಸೂದೆ. ಈ ಅಪಾಯ ಈ ಮಸೂದೆಗೆ ಇದೆ ಏಕೆಂದರೆ, ಇಲ್ಲಿ ಮಾಸಲಾತಿ ನಿಯಮಗಳನ್ನು ಏನು ಜೋಡಿಸಿದ್ದೀರಿ, ನನಗೆ ಗೊತ್ತಿರತಕ್ಕ ಮಾಹಿತಿ ಪ್ರಕಾರ ನಿಮ್ಮ ಕಾನೂನು ವ್ಯಾಪ್ತಿ ಮೀರಿ ಕೆಲವು ನಿಯಮಗಳು ಇಲ್ಲಿ ಸೇರಿವೆ. ನೀವಿನ್ನೂ ನನಗೆ ಪ್ರತಿ ಕೊಟ್ಟಿಲ್ಲ. ಆದ್ದರಿಂದ, ವಿವರದ ಬಗ್ಗೆ ನಾನು ಮಾತನಾಡುವುದಾಗಿಲ್ಲ. ಆದರೆ, ನನಗೆ ಮಾಹಿತಿ ಗೊತ್ತಿದೆ, ಅವರು ನನಗೆ ಪ್ರತಿ ಕೊಡದೇ ಇದ್ದರೂ ಕೂಡ, ನಾನು ಆ ಪ್ರತಿಯನ್ನು ಯಾವುದೋ ಒಂದು ರೀತಿಯಿಂದ ತೆಗೆದುಕೊಂಡಿದ್ದೇನೆ. ಇದನ್ನು ಹೇಳಬೇಕೋ ಅಥವಾ ಬಿಡಬೇಕೋ ಗೊತ್ತಿಲ್ಲ, ಆದರೂ ಹೇಳುತ್ತಿದ್ದೇನೆ. ಆದರೆ, consequence ಏನಾಗುತ್ತದೆ. ಚುನಾವಣೆ ನಡೆಯುವುದಿಲ್ಲ. ಪಂಚಾಯತ್‌ರಾಜ್ ವ್ಯವಸ್ಥೆಗೆ ಸಂಬಂಧಪಟ್ಟ ಈ ಮಸೂದೆ ಪಾಸಾಗಿ ನೀವೇನಾದರೂ ಚುನಾವಣೆಯನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟರೆ, ಚುನಾವಣೆ ನಡೆಯುವುದಿಲ್ಲ. ಇದನ್ನು ನ್ಯಾಯಾಲಯ ತಡೆಗಟ್ಟುವುದು ಖಚಿತ. ಆ ದೃಷ್ಟಿಯಿಂದ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವತ್ತು ತಾವು ಇದನ್ನು ಮಂಡಿಸಬೇಡಿ. ಇವತ್ತು ನಮಗೆಲ್ಲರಿಗೂ ಪ್ರತಿಗಳನ್ನುಕಳುಹಿಸಿಕೊಡಿ. ಅನಂತರ, ನಾವು ನಮ್ಮ ಟಿಪ್ಪಣಿಯನ್ನು ಏನು ಮಾಡಬೇಕೋ ಅದನ್ನು ಕೊಡುತ್ತೇವೆ. ಈ ಮಸೂದೆಯಲ್ಲಿ ಸಂವಿಧಾನ ಬಾಹಿರವಾದ ಅಂಶಗಳು ಏನಿದೆ, ಅವುಗಳನ್ನು ಮಂಡನೆಗೆ ಮುಂಚೆ ನಾವು ಕೊಡುತ್ತೇವೆ. ಆಮೇಲೆ, ಏನು ಬದಲಾವಣೆ ಮಾಡಬೇಕೋ ಅದನ್ನು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬಹುದು.

ಶ್ರೀ ಎಂ. ವೈ. ಘೋರ್ಪಡೆ :- ಮಾನ್ಯ ಅಧ್ಯಕ್ಷರೇ, ಇವರ ಬಗ್ಗೆ ತಪ್ಪುಕಲ್ಪನೆ ಬರಲಿಕ್ಕೆ ಸ್ವಲ್ಪವೂ ಅವಕಾಶ ಇಲ್ಲವೆಂದು ನನ್ನ ಅಭಿಪ್ರಾಯ, ನನ್ನ ಭಾವನೆ ಕೂಡ ಈ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಂದ ನಂತರ ಅದಕ್ಕೆ ಅನುಗುಣವಾಗಿ ರಾಜ್ಯ ಮಟ್ಟದಲ್ಲಿ ನಾವು ಕಾನೂನು ಮಾರ್ಪಡು ಮಾಡಬೇಕು, ಎನ್ನುವುದರ ಬಗ್ಗೆ ಇಡೀ ದೇಶದಲ್ಲಿ ಒಮ್ಮತ ಇದೆ. ಅದರ ಬಗ್ಗೆ ಭಿನ್ನಾಭಿಪ್ರಾಯಬರಲಿಕ್ಕೆ ಸಾಧ್ಯ ಇಲ್ಲ. ಪ್ರೊ: ನಂಜುಂಡಸ್ವಾಮಿಯವರಿಗೆ ಕಾನೂನಿನಲ್ಲಿ ನನಗಿಂತ ಬಹಳ ಅನುಭವವಿದೆ. ಅವರಿಗೆ ಸ್ಪಷ್ಟವಾಗಿ ಗೊತ್ತಿರಲೇಬೇಕು. ಇದು ತರಬೇಕಾದ್ದು ಅನಿವಾರ್ಯ ಅಂತ. We have no alternative but to amend our Act to make it consistent with the 73rd amendment. ಆದ್ದರಿಂದ ಈ ತಿದ್ದುಪಡಿಗೆ ಹೊಸದಾಗಿ ಕಾನೂನು ತರುವಾಗ ಯಾವ ರೀತಿಯಲ್ಲಿ ತರಬೇಕು ಅದರ ಬಗ್ಗೆ ಸ್ವಲ್ಪ ಚರ್ಚೆ ನಡೆದಿದೆ. ತಮಗೇ ಗೊತ್ತಿರುವ ಹಾಗೆ ವಿರೋಧಪಕ್ಷದ ನಾಯಕರೂ ಕೂಡ ಈ ಮಾತನ್ನು ಪ್ರಾಮಾಣಿಕವಾಗಿ ಒಪ್ಪುತ್ತಾರೆ. ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ನಾನೂ ಕೂಡ ಭಾಗವಹಿಸಿದ್ದೆ. ತಮ್ಮ ಸೂಚನೆ ಪ್ರಕಾರ

ನಮ್ಮೆಲ್ಲರ ಉದ್ದೇಶ ಈ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕಾನೂನನ್ನು ಆದಷ್ಟು ಬೇಗ ನಾವು ತರಬೇಕು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಮತ್ತು ಸುಪ್ರೀಂ ಕೋರ್ಟ್ ಆದೇಶ ಕೂಡ ಇದೆ. ಜೂನ್ ತಿಂಗಳ ಒಳಗಾಗಿ ಚುನಾವಣೆ ನಡೆಸಬೇಕು ಎಂದು ಇದೆ. ಅದಕ್ಕಾಗಿ ಇದನ್ನು ಆದಷ್ಟು ಬೇಗ ಕಾನೂನು ಆಗಿ ಮಾಡದೇ ಹೋದರೆ ಮತ್ತೆ ನಾವು ಮುಂದಿನ ಬೇರೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಇದರ ಬಗ್ಗೆ ಕೂಡ ಭಿನ್ನಾಭಿಪ್ರಾಯ ಇಲ್ಲ. ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ವಿಷಯ ಬಂದಾಗ ಸ್ಪಷ್ಟವಾದ ಒಂದು ಅಭಿಪ್ರಾಯಕ್ಕೆ ಒಂದು ತೀರ್ಮಾನಕ್ಕೆ ನಾವು ಎಲ್ಲರೂ ಬಂದಿದ್ದೆವು. ಅದೇನೆಂದರೆ ನಿನ್ನೆ ಈ ಬಿಲ್‌ನ್ನು ಇಂಟರ್‌ಡ್ಯೂಸ್ ಮಾಡಿ ಆ ನಂತರ ಈ ಬಿಲ್‌ನ್ನು ಅಭ್ಯಾಸ ಮಾಡಲಿಕ್ಕೆ 3-4 ದಿವಸ ಟೈಮ್ ಕೊಟ್ಟು 5ನೇ ತಾರೀಖಿನಿಂದ ಈ ಬಿಲ್‌ನ ಬಗ್ಗೆ ಚರ್ಚೆ ನಡೆಯಬೇಕು. 8ನೇ ತಾರೀಖು ಇದನ್ನು ಪೂರೈಸಿ ಕೊಡಬೇಕು ಎಂದು ಇದರ ಬಗ್ಗೆ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಎಳ್ಳಷ್ಟು ಭಿನ್ನಾಭಿಪ್ರಾಯ ಇರಲಿಲ್ಲ. ತಾವೇ ಹೇಳಿದ ಪ್ರಕಾರ ನನ್ನ ಅಭಿಪ್ರಾಯ ಕೂಡ 3-4 ದಿವಸಗಳ ಮುಂಚೆಯೇ ಇದನ್ನು ಮಂಡಿಸಬೇಕು ಅಂತ ಅದೇ ರೀತಿಯಾಗಿ ವಿರೋಧಪಕ್ಷದ ನಾಯಕರ ಅಭಿಪ್ರಾಯ ಕೂಡ ಆಗಿದೆ. ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಹಾಗೆ 5 ನೇ ತಾರೀಖಿಗೆ ಏನಾದರೂ ನಾವು ಚರ್ಚೆ ಮಾಡುವುದಾದರೆ ನ್ಯಾಯವಾಗಿ ನಾವು 2-3 ದಿವಸಗಳ ಮುಂಚಿತವಾಗಿ ಈ ಬಿಲ್ ನ ಪ್ರತಿಕ್ರಿಯೆಯನ್ನು ಹಂಚಬೇಕು. ಆ ನಂತರ ಚರ್ಚೆ ಮಾಡುವುದು ಸೂಕ್ತ ಅಂತ ನಾನು ಹೇಳಿದ್ದೆ. ನಾನು ಹೇಳಿದ ಮೇಲೆ ಆ ಅಭಿಪ್ರಾಯಕ್ಕೆ ಎಲ್ಲರೂ ಒಪ್ಪಿದ್ದರು, ಆ ದೃಷ್ಟಿಯಲ್ಲಿ ಇವೊತ್ತು ಇದನ್ನು ತಂದಿದ್ದೇವೆ. ಇದನ್ನು ನಾವೇನು ಕೊನೆಯ ಘಳಿಗೆಯಲ್ಲಿ ಕೊಟ್ಟು ವಿರೋಧಪಕ್ಷದವರಿಗೆ ಸಾಕಷ್ಟು ಅವಕಾಶ ಕೊಡಬಾರದು ಎನ್ನುವ ಅಭಿಪ್ರಾಯ ಇದರಲ್ಲಿ ಯಾರಿಗೂ ಇರಲಿಲ್ಲ. ಮತ್ತೆ ಎಷ್ಟೋ ಬಿಲ್‌ಗಳನ್ನು ನಾವು ಪಾಸ್ ಮಾಡುತ್ತೇವೆ ಮತ್ತೆ ನಾವು ಎಷ್ಟೋ ಸಲ ಅದೇ ದಿನ ಬಿಲ್‌ಗಳನ್ನು ಕೊಟ್ಟು ಪಾಸ್ ಮಾಡಿದ್ದುಂಟು. ಆದರೆ ಈ ಬಿಲ್ಲು ನಿನ್ನೆ ಪ್ರಿಂಟ್ ಆಯಿತು. ಸರ್ವರಿಗೂ ಈ ಬಿಲ್‌ಗಳ ಪ್ರತಿಗಳನ್ನು ಹಂಚಿದ್ದೇವೆ.

ಶ್ರೀ ಎಚ್. ಏಕಾಂತಯ್ಯ :- ಈಗ You are moving the Bill

ಶ್ರೀ ಎಂ. ವೈ. ಘೋರ್ಪಡೆ :- ಬಿಲ್ ಇಂಟರ್‌ಡಕ್ಷನ್ ಮಾಡುವಾಗ ಸಭೆಯ ಗಮನಕ್ಕೆ ತರುತ್ತಿದ್ದೇವೆ. ಅದು ಫಾರ್ಮಾಲಿಟಿ. ತಮಗೆ ಇದರ ಬಗ್ಗೆ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳಿಲ್ಲ. ಇದನ್ನು ಫಾರ್ಮಲ್ ಆಗಿ ಮುಗಿಸಿದ ಮೇಲೆ then the House is seized of the bill ..... ಹೀಗಿರುವಾಗ ಇದರಲ್ಲಿ ಒಂದು ಪರ್ಸೆಂಟ್ ಕೂಡ ಚಾನ್ಸಸ್‌ಗೆ ಅವಕಾಶ ಇಲ್ಲ. ಕಾನ್‌ಸ್ಟಿಟ್ಯೂಶನಲ್ ಆಧಾರದ ಮೇಲೆ ಇದಕ್ಕೆ ವಿರೋಧ ಮಾಡುವುದಕ್ಕೆ ಎಳ್ಳಷ್ಟು ಅವಕಾಶ ಇಲ್ಲ on the other way also constitutional amendment...ಆದ ನಂತರ ಇಂತಹ ಒಂದು ಬಿಲ್ ತರುವುದು ಎಲ್ಲಾ ರಾಜ್ಯಗಳಿಗೂ ಅನಿವಾರ್ಯ. ಸಂವಿಧಾನಕ್ಕೆ ವಿರುದ್ಧವಾಗಿ ತರುವುದಕ್ಕೆ ಅವಕಾಶವಿಲ್ಲ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ಸಂವಿಧಾನದ 72ನೇ ತಿದ್ದುಪಡಿ ಬಿಲ್ ನನ್ನ ಕೈಯಲ್ಲಿದೆ ಅದಕ್ಕೆ ಇನ್ನೂ ರಾಷ್ಟ್ರಾಧ್ಯಕ್ಷರಿಂದ ಅನುಮತಿ ಕೊಟ್ಟಿಲ್ಲ Assent has not been given by the President yet .... Present's assent to the 72nd amendment yet to be given. It is not amended...

Sri M.Y. Ghorpade :- The constitutional amendment has been passed by the Parliament.

Prof M.D. Nanjundaswamy :- O.K.

Sri M.Y. Ghorpade :- It has been endorsed in this House. Technically, What the professor says, may be true. Before we complete this process

of passing the Bill in karnataka and giving effect to it, certainly by this time this tech-nical point also will not be there. Now, supposing if we wait and go on posttrning this Bill, we will not be giving sufficient respect to the Intimation of the Supreme Court that as early as possible we have to bring in a new legislation and I have made a solemn assurance here and on the floor of the Upper House that a new, Panchayat raj system in Karnataka will be brought by the end of this year.

ಮತ್ತೆ ಮೊನ್ನೆ ಕೌನ್ಸಿಲ್‌ನಲ್ಲಿ ಉತ್ತರ ಕೊಡುವಾಗ, ಇದೇ ಪ್ರಶ್ನೆಯನ್ನು ಅವರು ಕೇಳಿದ್ದರು. ಸುಪ್ರೀಂಕೋರ್ಟ್‌ನ ಆದೇಶ ನಿಮಗೆ ಗೊತ್ತಿದೆಯೇ ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಬಿಲ್ ಪಾಸ್ ಆದ ತತ್‌ಕ್ಷಣ ಡಿಲಿಮಿಟೇಶನ್ ಕೆಲಸವನ್ನು ಪ್ರಾರಂಭ ಮಾಡಿ, ಆ ಮೇಲೆ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಸುಪ್ರೀಂ ಕೋರ್ಟ್‌ಗೆ ನಾವು ಏನು ವಿಚಾರ ಹೇಳಬೇಕು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಈಗ ನಾವು ಬಿಲ್ ಪಾಸ್ ಮಾಡದೇ, ಡಿಲಿಮಿಟೇಷನ್ ಕೆಲಸವನ್ನು ಪ್ರಾರಂಭ ಮಾಡದೇ ಹೋದರೆ, ಆಗ ನಾವು ಸುಪ್ರೀಂ ಕೋರ್ಟ್‌ಗೆ, ಅವರೇನು ಇದರ ಬಗ್ಗೆ ಕಾಳಜಿಯನ್ನು ತೋರಿಸಿದ್ದಾರೆ, ಅದರ ಕಡೆಗೆ ನಾವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ ಹಾಗೆ ಆಗುತ್ತದೆ, ಅಂಥ ನಿರ್ಲಕ್ಷ್ಯವನ್ನು ಈ ಸರಕಾರವು ಮಾಡಲು ತಯಾರಾಗಿಲ್ಲ. ಹಾಗೆಯೇ ಪ್ರೊ: ನಂಜುಂಡಸ್ವಾಮಿಯವರು ಬೇರೆ ವಿಚಾರಗಳನ್ನು ಎತ್ತಿದ್ದಾರೆ. ನಾವು ಏನು ವಿಚಾರಗಳನ್ನು ಬಿಲ್‌ನಲ್ಲಿ ಸೇರಿಸಿದ್ದೇವೆ, whether it can be challenged in a court of law. ಅಂತ ಹೇಳಿ ತಮಗೂ ಗೊತ್ತಿದೆ, ಯಾವ ಬಿಲ್‌ನ್ನು ಮಾಡಿದರೂ ಕೂಡ, ಯಾವುದಾದರೂ ಒಂದು ಪಾಯಿಂಟ್‌ನ ಮೇಲೆ ಕೋರ್ಟ್‌ಗೆ ಹೋಗುವಂಥ ಹಕ್ಕು ಸರ್ವರಿಗೂ ಇದೆ. ಯಾವ ಬಿಲ್ ಮಾಡಿದರೂ ಕೂಡ ಆ ಬಿಲ್ ಪಾಸ್ ಆದ ತಕ್ಷಣ ಯಾರೂ ಕೋರ್ಟ್‌ಗೆ ಹೋಗಲಿಕ್ಕಿಲ್ಲ ಎಂಬ ಆಶ್ವಾಸನೆ ಯಾವ ಮಂತ್ರಿಯಾಗಲೀ, ಯಾವ ಸರಕಾರವೇ ಆಗಲೀ ಕೊಡಲು ತಯಾರಾಗಿಲ್ಲ. ಆದರಲ್ಲಿ ಕೋರ್ಟ್‌ಗೆ ಹೋಗುವಂಥ ವಿಷಯ ಏನಾದರೂ ಇದ್ದರೆ ಕೋರ್ಟ್‌ಗೆ ಹೋಗುತ್ತಾರೆ. ಅದರ ಬಗ್ಗೆ ನಾವು ಬಿಲ್ ಪಾಸ್ ಮಾಡುವಾಗ ಯಾವುದು ನ್ಯಾಯವಾಗಿದೆ, ಯಾವುದು ಸಮ್ಮತವಾಗಿದೆ, ಯಾವುದು ಕಾನೂನು ಸಮ್ಮತವಾಗಿದೆ ಆದನ್ನು ಪಾಸ್ ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಚರ್ಚೆಗೆ ಬಂದಾಗ ತಾವುಗಳು ಏನಾದರೂ ಹೇಳುವುದಾದರೆ, ಇಂಥ ಒಂದು ಕ್ಲಾಸ್, ಇಂಥ ಕಾನೂನಿಗೆ ಅಡ್ಡವಾಗಿದೆ, ಎಂದು ಹೇಳಿದರೆ ಅದರ ಬಗ್ಗೆ ನಾವು ಸಂಪೂರ್ಣವಾಗಿ ಗಮನಕೊಡಲು ನಾವು ತಯಾರಾಗಿದ್ದೇವೆ. ಹಾಗೆಯೇ ತಾವುಗಳು ಚರ್ಚೆ ಮಾಡದೇ, ಇಂಥ ಅಂಶಗಳನ್ನು ಈ ಸ್ಟೇಜ್‌ನಲ್ಲಿ ಎತ್ತುವುದಕ್ಕೆ ಅವಕಾಶ ಇಲ್ಲವೆಂದು ನನಗನ್ನಿಸುತ್ತದೆ. ಈ ವಿಚಾರದಲ್ಲಿ ನಮ್ಮ ರಾಜ್ಯದ ನಾಲ್ಕು ಕೋಟಿ ಜನತೆಯು ನಮ್ಮ ಕಡೆಗೆ ನೋಡುತ್ತಾ ಇದ್ದಾರೆ, ಎಷ್ಟರ ಮಟ್ಟಿಗೆ ನಾವು ವಿಕೇಂದ್ರಿಕರಣ ಮಾಡಲು ಹೊರಟಿದ್ದೇವೆ. ಮತ್ತು ಆದರಲ್ಲಿ ಎಷ್ಟರ ಮಟ್ಟಿಗೆ ಪ್ರಾಮಾಣಿಕತೆ ಇದೆ ಎಂಬ ಬಗ್ಗೆ ನಮ್ಮನ್ನು ಮತ್ತು ನಿಮ್ಮನ್ನು ಸೇರಿಸಿ ನೋಡುತ್ತಾ ಇದ್ದಾರೆ. ಆದ್ದರಿಂದ ದಯಮಾಡಿ ಜನರು ತಮ್ಮ ಮೇಲೆ ಮತ್ತು ಸರಕಾರದ ಮೇಲೆ ಏನು ವಿಶ್ವಾಸವನ್ನು ಇಟ್ಟಿದ್ದಾರೆ ಅದನ್ನು ಈ ತರಹದ ಟೆಕ್ನಿಕಲ್ ಪಾಯಿಂಟ್ಸನ್ನು ಎತ್ತುವುದರ ಮೂಲಕ ಆ ವಿಶ್ವಾಸವನ್ನು ಹಾಳುಮಾಡಿಕೊಳ್ಳುವುದು ಬೇಡ. ಎಲ್ಲರಿಗೂ ವಿಕೇಂದ್ರಿಕರಣದ ಬಗ್ಗೆ ಒಮ್ಮತ ಇದೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ, ಅದರಲ್ಲಿ ರಾಜಕೀಯ ತರುವ ಪ್ರಯತ್ನವನ್ನು ಯಾರೂ ಮಾಡಲಿಕ್ಕಿಲ್ಲ ಎಂಬ ಸಂಪೂರ್ಣವಾದ ವಿಶ್ವಾಸವನ್ನು ನಮ್ಮಲ್ಲಿ ಮತ್ತು ನಿಮ್ಮಲ್ಲಿ ನಾಡಿನ ಜನತೆ ಏನು ಇಟ್ಟುಕೊಂಡಿದ್ದಾರೆ, ಆದಕ್ಕೆ ನಾವುಗಳು ಧಕ್ಕೆ ತರುವುದು ಬೇಡ. ಮಾನ್ಯ ವಿರೋಧ-ಪಕ್ಷದ ನಾಯಕರು, ಸಿಂಧ್ಯರವರು ಕೂಡ ಬಿಎಸಿಯಲ್ಲಿ ಇದ್ದರು. ಬಹುಶಃ ವಿರೋಧ-ಪಕ್ಷದ ನಾಯಕರು ಅಲ್ಲಿ ಏನಾಯಿತು ಎಂಬುದನ್ನು ಸರಿಯಾಗಿ ಹೇಳಿದರೆ, ಮಾನ್ಯ ಏಕಾಂತಯ್ಯನವರು ಈ ಪ್ರಶ್ನೆಯನ್ನು ಎತ್ತುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ. ಆದ್ದರಿಂದ ಈ ಫಾರ್ಮಾಲಿಟಿ ಏನಿದೆ, ಇದು ನಮ್ಮ ಹಕ್ಕು ಇದೆ. ಈ ಬಿಲ್ ತರುವಲ್ಲಿ ಸರಕಾರದ ನೇರವಾದ ಹಕ್ಕು ಇದೆ. ಆ ಜವಾಬ್ದಾರಿಯನ್ನು ನಿಮ್ಮ ಮೇಲೆ ಬಿಡಲು ನಾವು

ತಯಾರಾಗಿಲ್ಲ. ಏಕೆಂದರೆ ನಾವು ಜನತೆಗೆ ಮಾತುಕೊಟ್ಟ ಪ್ರಕಾರ ನಾವು ತರಲೇ ಬೇಕಾಗಿದೆ. ಆದರಲ್ಲಿ ತಾವುಗಳು ಏನಾದರೂ ದೋಷಗಳನ್ನು ಹುಡುಕುವುದಾದರೆ ಚರ್ಚೆಯ ಕಾಲಕ್ಕೆ ಅದನ್ನು ಮುಕ್ತವಾಗಿ ಸ್ವಾಗತಿಸುತ್ತೇನೆ. ಆದರಲ್ಲಿ ಏನಾದರೂ ಅಮೆಂಡ್‌ಮೆಂಟ್‌ನ್ನು ತರುವ ಅವಶ್ಯಕತೆ ಇದ್ದರೆ ಖಂಡಿತವಾಗಿಯೂ ನಾವು we will not stand on prestige ಆದರೆ ನೀವು ಇಂಟ್ರಡಕ್ಷನ್ನನ್ನೇ ಸ್ಟಾಲ್ ಮಾಡುವುದಾದರೆ, ಅದಕ್ಕೆ ಅಡ್ಡ ಬರುವುದಾದರೆ, ಹೊರಗಡೆ ಇರತಕ್ಕಂಥ ಜನತೆಗೆ ತಪ್ಪು ಅಭಿಪ್ರಾಯ ಮಾಡಿದಂತೆ ಆಗುತ್ತದೆ, ಅದು ಬೇಡ ಎಂದು ಹೇಳಿ ನನ್ನ ವಿನಮ್ರವಾದಂಥ ವಿನಂತಿ.

ಶ್ರೀ ವಿ. ಆರ್. ದೇಶಪಾಂಡೆ :- ಮಾನ್ಯ ಸಚಿವರು ತಪ್ಪುಕಲ್ಪನೆ ಮಾಡಿಕೊಂಡಿದ್ದಾರೆ. ಬಿಎಸಿಯಲ್ಲಿ ಏನು ಡಿಸ್‌ಕಷನ್ ಆಗಿತ್ತು? ಆದಷ್ಟು ಬೇಗನೆ ಈ ಬಿಲ್‌ನ್ನು ತರಬೇಕು, ಚರ್ಚೆಗೆ ಅವಕಾಶ ಕೊಡಬೇಕು ಎಂದು ಆಗಿತ್ತು ಇದನ್ನು ಬಿಟ್ಟು ಬೇರೆ ಏನಾಗಿತ್ತು ? ಇಲ್ಲಿ ಮಾನ್ಯ ಏಕಾಂತಯ್ಯನವರು ಮತ್ತು ನಾನು ಎತ್ತಿದ ವಿಚಾರ ಎಂದರೆ, ಈ ಬಿಲ್ ನ್ನು ತಾವುಗಳು ಏನು ಇಂಟ್ರಡ್ಯೂಸ್ ಮಾಡುತ್ತಾ ಇದ್ದೀರಿ, ಕಾನೂನು ನಿಯಮಗಳ ಪ್ರಕಾರ ಎರಡು ದಿವಸಗಳ ಮುಂಚಿತವಾಗಿಯೇ ಈ ಬಿಲ್‌ನ ಪ್ರತಿಯನ್ನು ಸದಸ್ಯರಿಗೆ ಕಳುಹಿಸಬೇಕಾಗಿತ್ತು. ಇಲ್ಲಿ ನಾನು ಮಂತ್ರಿಗಳ ಬೋನಾಫೈಡ್ ಬಗ್ಗೆ ಚಾಲೆಂಜ್ ಮಾಡುತ್ತಾ ಇಲ್ಲ. ಬಿಲ್ ಬೇಡ ಎಂದು ಹೇಳುತ್ತಿಲ್ಲ, ನಮಗೆ ಬಿಲ್ ಮುಖ್ಯವಾಗಿ ಚರ್ಚೆ ಬೇಕಾಗಿದೆ. ಆದಷ್ಟು ಬೇಗ ಚುನಾವಣೆ ಮಾಡಿ ಎಂದು ನಾವೇ ಬೆನ್ನು ಹತ್ತಿದ್ದೇವೆ. We have brought an amendment.

ಪ್ರಶ್ನೆ ಏನೆಂದರೆ ಎರಡು ದಿನ ಮುಂಚಿತವಾಗಿ ನೀವು, ಬಿಲ್ ಪ್ರತಿಗಳನ್ನು ಕಳುಹಿಸಬೇಕಾಗಿತ್ತು. ಅದನ್ನು ಕಳುಹಿಸಿಲ್ಲ. ಆದ್ದರಿಂದ ನಿಮಗೆ ಇವೊತ್ತು ಇಂಟ್ರಡ್ಯೂಸ್ ಮಾಡುವ ಅಧಿಕಾರ ಇಲ್ಲ, ನೀವು ಒಂದನೇ ತಾರೀಖಿಗೆ ಇಂಟ್ರಡ್ಯೂಸ್ ಮಾಡಿ ಎಂದು ಹೇಳುತ್ತಿದ್ದೇನೆ. ಎರಡನೇಯದಾಗಿ ಮಾನ್ಯ ಸಚಿವರು ಇದು ಕೇವಲ ಟೆಕ್ನಿಕಲ್ ಪಾಯಿಂಟ್, ಬೇರೆ ಏನೂ ಎಫೆಕ್ಟ್ ಇಲ್ಲ ಎಂದು ಹೇಳಿದರು. ಆದರೆ ಇದು ಟೆಕ್ನಿಕಲ್ ಅಲ್ಲ ಇದು ಲೀಗಲ್ ಪಾಯಿಂಟ್ ಆಗಿದೆ. And this legal objections have to be raised only at the time of introduction. As per rule 81.

"Provided that the motion is opposed" This is the time. Legal points have to be raised now only. We cannot raise it afterwards, we have not right ಹಾಗಾಗಿ ತಮ್ಮದು ತಪ್ಪು ಕಲ್ಪನೆಯಾಗಿದೆ. What Mr. Ekanthaiah has raised is correct.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಸಚಿವರು ನಾವು ಹೇಳಿದಂಥದ್ದನ್ನು ಬಿಟ್ಟು ಉಳಿದುದೆಲ್ಲವನ್ನೂ ಹೇಳಿದ್ದಾರೆ. ನಾವು ವಿರೋಧ ಪಕ್ಷದ ಸದಸ್ಯರಾಗಿ ಮತ್ತು ಇಲ್ಲಿರುವಂಥ ಎಲ್ಲಾ ವಿರೋಧಪಕ್ಷಗಳ ಸದಸ್ಯರುಗಳೂ ಸಹ ನಾವು ಈ ಪಂಚಾಯತ್‌ರಾಜ್ಯ ವಿಧೇಯಕಕ್ಕೆ ಚರ್ಚೆ ಮಾಡಲು ಅದನ್ನು ಜಾರಿಗೆ ತರಲು ನಮ್ಮ ವಿರೋಧವೇ ಇಲ್ಲ. ಈ ಜನತಂತ್ರ ವ್ಯವಸ್ಥೆಯನ್ನು ವಿಕೇಂದ್ರೀಕರಣ ಮಾಡಲು ಆ ವಿಚಾರದಲ್ಲಿ ನಾವು ಮೊದಲಿನಿಂದಲೂ ಹೋರಾಟ ಮಾಡಿದವರಾಗಿದ್ದೇವೆ. ಆದರೆ ಇದನ್ನು ಸರಕಾರ ತನಗೆ ಇಷ್ಟ ಬಂದ ಹಾಗೆ ತರಲಿಕ್ಕೆ ಸಾಧ್ಯವಿಲ್ಲ. ಸರಕಾರದವರು ಕನಿಷ್ಟ ಎರಡು ದಿವಸಗಳ ಮುಂಚೆ ಕೊಡಬೇಕೆನ್ನುವ ಮಾತನ್ನು ಹೇಳಿದ್ದೇನೆ. ನಮಗೆ ನಿಯಮಗಳ ಪ್ರಕಾರ ಕೆಲವು ಹಕ್ಕುಗಳನ್ನು ಕೊಟ್ಟಿದ್ದೀರಿ. ಮಂಡನೆಗೆ ಮುಂಚೆ ಇದನ್ನು ವಿರೋಧ ಮಾಡುವ ಹಕ್ಕನ್ನು ನಮಗೆ ಕೊಟ್ಟಿದ್ದೀರಿ. ಅದು ಯಾವ ಕಾರಣಕ್ಕಾಗಿ ಎಂದರೆ, ಈ ಒಂದು ಕಾರಣಕ್ಕಾಗಿ ಅದು ಸದನದ ವ್ಯಾಪ್ತಿ ಮೀರಿದ ವಿಧೇಯಕವಾಗಿದ್ದರೆ, ಅದರ ಬಗ್ಗೆ ಏನಾದರೂ ಎತ್ತುವುದಿದ್ದರೆ ಈ ಹಂತದಲ್ಲಿ ಮಾತ್ರ ಎತ್ತಲು ಒಂದು ಹಕ್ಕನ್ನು ಕೊಟ್ಟಿದ್ದೀರಿ. ಅದು ನಿಯಮ 80ರ ಪ್ರಕಾರ ನಮಗೆ ಆ ಹಕ್ಕು ಇದೆ. ಈ ಹಕ್ಕನ್ನು ನಾವು ಸರಿಯಾದ ರೀತಿಯಲ್ಲಿ ಚಲಾವಣೆ ಮಾಡಬೇಕಾದರೆ, ನಮ್ಮ ಕರ್ತವ್ಯವನ್ನು ನಿರ್ವಹಿಸ ಬೇಕಾದರೆ ಈ ವಿಧೇಯಕದ ಪ್ರತಿಯ ಅವಶ್ಯಕತೆ ಇದೆಯೋ? ಅಥವಾ

ಇಲ್ಲವೋ ಎಂಬ ಬಗ್ಗೆ ನಾನು ತಮ್ಮಿಂದ ತಿಳಿಯ ಬಯಸುತ್ತೇನೆ. ಈ ಒಂದು ವ್ಯವಹಾರದಲ್ಲಿ ಪಾರ್ಲಿಮೆಂಟಿನಲ್ಲಿ ಏನು ನಡೆಯುತ್ತಾ ಇದೆ, ಅದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಅಧ್ಯಕ್ಷರೇ, By reading of this rule 80 there is no time prescribed.

ಶ್ರೀ ಹೆಚ್. ಏಕಾಂತಯ್ಯ :- ಹಾಗಾದರೆ ನಮ್ಮಲ್ಲಿ ಕೌಲ್ ಅಂಡ್ ಶಕ್‌ದರ್ ಬೇಡ, ನಮ್ಮ ನಿಯಮಗಳು ಬೇಡ, ಯಾವ ಒಂದು ಸಂಪ್ರದಾಯಗಳು ಈ ನಿಯಮಗಳಲ್ಲಿ ಇಲ್ಲ, ಆ ಒಂದು ಸಂಪ್ರದಾಯ ಕಾಮನ್‌ವೆಲ್ತ್ ಮತ್ತು ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಮೊದಲಿನಿಂದ ಏನು ನಡೆದುಕೊಂಡು ಬಂದಿದೆ, ಅದನ್ನೇ ನಾವು ಪಾಲನೆ ಮಾಡಿಕೊಂಡು ಬಂದಿದ್ದೇವೆ. ಇದೇನೂ ಹೊಸದಾಗಿ ಅಲ್ಲ. ಯಾರಿಗೂ ಈ ಬಗ್ಗೆ ನಾನು ಹೇಳಬೇಕಾಗಿಲ್ಲ. ನಿಯಮ 80 ರ ಪ್ರಕಾರ ನಮಗೆ ನೀವೇನು ಹಕ್ಕನ್ನು ಕೊಟ್ಟಿದ್ದೀರಿ, ಅದರ ಪ್ರಕಾರ ನಾವು ಸಮರ್ಪಕವಾಗಿ ಚರ್ಚೆ ಮಾಡ ಬೇಕಾದರೆ, ಕನಿಷ್ಠ ಪಕ್ಷ ಈ ವಿಧೇಯಕದ ಪ್ರತಿಯನ್ನಾದರೂ ಕೊಡಿ ಎಂದು ಕೇಳಿದ್ದೇನೆ. ಆ ಪ್ರತಿಯನ್ನು ನೀವು ಕೊಟ್ಟಿಲ್ಲ ಅಂದರೆ ನಾವು ಈ ವಿಧೇಯಕಕ್ಕೆ ವಿರೋಧವಾಗಿದ್ದೇವೆ ಎಂಬ ಅರ್ಥವೆ ? ಇದು ಅರ್ಥ ಪೂರ್ಣವಾದ ಚರ್ಚೆಯಾಗಬೇಕೆಂಬ ದೃಷ್ಟಿಯಿಂದ ನಮಗೆ ಪ್ರತಿಗಳನ್ನು ಮುಂಚಿತವಾಗಿ ಕೊಡಬೇಕಾಗಿತ್ತು. ಸದನದ ಒಂದು ವ್ಯಾಪ್ತಿ ಏನಿದೆ ಕಾಂಪಿಟೆನ್ಸ್ ಆಫ್ ಲೆಜಿಸ್ಲೇಚರ್ ಎಂದೇನು ನಾವು ಹೇಳುತ್ತೇವೆ. ಅದಕ್ಕೆ ಹೊರತಾಗಿ ಇದ್ದಾಗ ಅದನ್ನು ಪರಿಶೀಲನೆ ಮಾಡದೇ ಚರ್ಚೆ ಮಾಡಬೇಕೆ ? ಮಾನ್ಯ ಮಂತ್ರಿಗಳೇ ಆಗಲೀ, ಯಾರೇ ಆಗಲೀ ಅದನ್ನು ಪರಿಶೀಲನೆ ಮಾಡದೇ ಮಾಡಲು ತಯಾರಾಗಿದ್ದಾರೆಯೇ? ನಾವಂತೂ ತಯಾರಾಗಿಲ್ಲ. ನಾವು ವಿಧೇಯಕವನ್ನು ಓದಿ ಅರ್ಥ ಮಾಡಿಕೊಂಡು, ತಿಳಿದರೆ ಅದರ ಬಗ್ಗೆ ಹೇಳಲು ಮಾತ್ರ ಸಮರ್ಥರಿದ್ದೇವೆಯೇ ಹೊರತು, ಅವರ ಮನೆಯಲ್ಲಿ ಪುಸ್ತಕ ಇದ್ದಾಗ ನಮ್ಮ ಕನಸಿನಲ್ಲಿ ಓದಿಕೊಂಡು ಇಲ್ಲಿ ಹೇಳಲು ತಯಾರಾಗಿಲ್ಲ. ಈ ವಿಧೇಯಕವನ್ನು ಈಗ ತಂದ್ದಿದ್ದಾರೆ, ಇದಕ್ಕೆ ಕನಿಷ್ಠ ಪಕ್ಷ ಎರಡು ದಿನಗಳ ನೋಟೀಸ್‌ನ ಅವಶ್ಯಕತೆ ಇದೆ. ಆದ್ದರಿಂದ ಆ ಒಂದು ಸಂಪ್ರದಾಯದ ಪ್ರಕಾರ ದಯವಿಟ್ಟು ಸೋಮವಾರ ಮಂಡನೆ ಮಾಡಿ. ನಮ್ಮ ತಕರಾರು ಇಲ್ಲ. ನಮಗೆ ಅವೊತ್ತಿನ ದಿವಸ the competence of the legislation ಅನುಮಾನ ಬಂದರೆ, ಮತ್ತಾವುದೇ ಕಾರಣಗಳಿಗಾಗಿ ಇಂಟ್ರಡಕ್ಷನ್ ಕುರಿತು ಹೇಳುವುದಾದರೆ ಹೇಳುತ್ತೇವೆ. ಇಲ್ಲವಾದರೆ ನಾವು ಸ್ವಾಗತ ಮಾಡುತ್ತೇವೆ. Introduction we will never oppose it.

ಈ ವಿಧೇಯಕ ಹಿಂದೆ ಬಂದಿದ್ದಾಗ ಮಾನ್ಯ ಘೋರ್ಪಡೆಯವರು ಅಪೋಸ್ ಮಾಡಿದ್ದೀರಿ. ಇಂಥ ನಿಮ್ಮ ಸರಕಾರವಿದು, ನಾಚಿಕೆಪಟ್ಟುಕೊಳ್ಳಬೇಕು. ತಮ್ಮ ಸರಕಾರ ಹುಡುಗಾಟಿಕೆ ಸರಕಾರ ಎಂದಾಗ ಮೊನ್ನೆಯ ದಿವಸ ಮಾನ್ಯ ಸಚಿವರು ಇಂಥ ಪದವನ್ನು ಏಕೆ ಉಪಯೋಗಿಸುತ್ತೀರಿ ಎಂದು ಕೇಳಿದರು. ಆದರೆ ಯಾರು ಈ ವಿಧೇಯಕದ ಮಂಡನೆಗೆ ವಿರೋಧ ಮಾಡಿದ್ದರು ಅವರಿಗೆ ನಾಚಿಕೆಯಾಗಬೇಕು. ಇವೊತ್ತು ಅದೇ ಜನರು ಹೀಗೆ ಹೇಳುತ್ತಿರುವುದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಮಾನ್ಯ ಅಧ್ಯಕ್ಷರೆ ? ಈಗ ಮುಖ್ಯವಾದಂಥ ವಿಧೇಯಕವನ್ನು ಚರ್ಚೆ ಮಾಡಲು ಅವಕಾಶವನ್ನು ಕೊಡಲಿಲ್ಲ, ಇವೊತ್ತಿನ ದಿವಸ ನಾವು ಏನಾದರೂ ವಿರೋಧ ಮಾಡಿದರೆ, ಅದನ್ನು ಬೇರೆ ಅರ್ಥ ಬರುವ ರೀತಿಯಲ್ಲಿ ಹೇಳಿದರೆ ಅದನ್ನು ತಾವು ಒಪ್ಪಿಕೊಳ್ಳಬೇಕೋ ಅಥವಾ ಬಿಡಬೇಕೋ ಎಂಬುದು ತಮಗೆ ಬಿಟ್ಟಿದ್ದುದು.

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಏಕಾಂತಯ್ಯನವರು ನಮಗೆ ಹಕ್ಕನ್ನು ಕೊಟ್ಟಿದ್ದೀರಿ ಎಂದು ಹೇಳುತ್ತಿದ್ದರು. ಆದರೆ ಅದು ಸಂವಿಧಾನದಲ್ಲಿಯೇ ಇದೆ. The powers and privileges of the Parliament and the State Legislatures and its Members are those of the House of Commons. ಅದು ಸಂವಿಧಾನದಲ್ಲಿಯೇ ಇದೆ,

ಅದನ್ನು ಬಿಟ್ಟು ನೀವೇನೂ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಸುಮ್ಮನೆ ಸೋಮವಾರದಂದು ಮಂಡಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :- ಪಂಚಾಯತ್ ರಾಜ್ ಮಸೂದೆಯು ಈಗ ಸದನದ ಮುಂದಿದೆ. ಅದನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಅದು ಇಂಟ್ರಡ್ಯೂಸಿಂಗ್ ಸ್ಟೇಜ್‌ನಲ್ಲಿದೆ. Alright he has to introduce. ಈಗ ಈ ಆಕ್ಷೇಪಣೆ ಏನಿದೆ, ಅದರ ತಾತ್ವಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಈಗ ಇದು ಇಷ್ಟಕ್ಕೇ ಸೀಮಿತವಾಗಿ ಉಳಿದುಕೊಂಡಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಪ್ರತಿಗಳನ್ನು ಎರಡು ದಿವಸಗಳ ಮುಂಚೆಯೇ ಕೊಡಬೇಕಾಗಿತ್ತು. ಏಕೆಂದರೆ ಇದೊಂದು ಬಹಳ ಪ್ರಾಮುಖ್ಯವಾದಂಥ ಮಸೂದೆಯಾಗಿದೆ. ಇದರ ಬಗ್ಗೆ ಸರಿಯಾಗಿ ಚರ್ಚೆ ಮಾಡಲು ಅನುಕೂಲವಾಗುವಂತೆ ಅಭ್ಯಾಸ ಮಾಡಲು ಸಮಯ ಕೊಟ್ಟಿಲ್ಲ ಎಂದು ತಮ್ಮ ವಾದ ಏನಿದೆ, ಈ ವಾದದಲ್ಲಿ ಸಾಕಷ್ಟು ಅರ್ಥವೂ ಇದೆ. ಅದನ್ನು ನಾನು ಒಪ್ಪುತ್ತೇನೆ. ಹಾಗೆಯೇ ಕೆಲವು ದಿನಗಳ ಹಿಂದೆಯೇ ಪ್ರತಿಗಳನ್ನು ಕೊಟ್ಟಿದ್ದಲ್ಲಿ ಇದರ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡಲು ಬರುತ್ತಿತ್ತು. ಆದರೆ ಈ ಮಾತುಗಳು ಇಂಟ್ರಡ್ಯೂಸ್ ಮಾಡಿದ ಮೇಲೆ ಮಾತ್ರ ಬರಬೇಕು. ಇಂಟ್ರಡ್ಯೂಸ್ ಮಾಡಿದ ಮೇಲೆ, ಅದನ್ನು ಚರ್ಚೆಗೆ ತೆಗೆದುಕೊಳ್ಳುವ ಮೊದಲು, ಬರಬೇಕು. 8 ನೇ ತಾರೀಖಿನವರೆಗೆ ಅಧಿವೇಶನ ಮುಂದುವರಿಸಿರುವ ಕಾರಣ ಮತ್ತು ಉದ್ದೇಶ ಕೂಡ ಇದಕ್ಕಾಗಿಯೇ. ಯಾಕೆಂದರೆ ಈ ಮಸೂದೆಯ ಮೇಲೆ ವ್ಯಾಪಕವಾಗಿ ಐದಾರು ದಿವಸಗಳ ಚರ್ಚೆಯಾಗಬೇಕು. ಅಂತಲೇ ನಮ್ಮ ಉದ್ದೇಶವಿದೆ. ಇದನ್ನು ಬೇಗನೆ ಮಾಡಿ ಮುಗಿಸಬೇಕೆಂದೇನೂ ಇಲ್ಲ. ಬಿಎಸಿಯಲ್ಲಿ ಒಂದು ವಿಚಾರ ನಿರ್ಣಯವಾದುದು ನಿಜ. ಬಜೆಟ್ ಆದ ಕೂಡಲೇ ಇದು ಇಂಟ್ರಡ್ಯೂಸ್ ಆಗಬೇಕೆಂದು ಇರತಕ್ಕಂಥಾದ್ದು. ಇಂಟ್ರಡ್ಯೂಸ್ ಮಾಡುವ ಈ ಹಂತದಲ್ಲಿ ತಾವುಗಳು ಆಕ್ಷೇಪಣೆ ಮಾಡುವುದು ಅಷ್ಟು ಸಮಂಜಸವೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕು. I am not understnding. One minute .....

ಶ್ರೀ ಹೆಚ್ ಏಕಾಂತಯ್ಯ :- ನಾನು ಏನು ಹೇಳಿದ್ದೇನೆ ಎಂಬುದನ್ನು ತಾವುಗಳು ತಿಳಿದುಕೊಂಡು ಹೇಳಿದ್ದರೆ ನನಗೂ ಸಮಾಧಾನವಾಗುತ್ತಿತ್ತು. ನಾನು ಕೌಲ್ ಅಂಡ್ ಶಕ್‌ದರ್ ಕೋಟ್ ಮಾಡಿ ಹೇಳಿದ್ದೆ. "The Bill is not included in the list of business for the introduction until copies of the Bill have been made available to members atleast two days before the day on which is proposed to be introduced ."

Sri M.Y. Ghorpade :- There is obvious confusion. This Rule 80 refers to introduction. ಅದರಲ್ಲಿ 2 ದಿನ ಟೈಮ್ ಕೊಡುವ ಬಗ್ಗೆ ಏನೂ ವಿಚಾರವಿಲ್ಲ. ನೀವು ನೋಡುತ್ತಿರುವುದು ರೂಲ್ 83 ನೋಡುತ್ತಿದ್ದೀರಿ. ಅದು ಬಿಲ್ ಇಂಟ್ರಡಕ್ಷನ್ ಆದ ಮೇಲೆ ಏನೇನು ಕ್ರಮ ನಡೆಯಬೇಕೋ ಅದಕ್ಕೆ ಸಂಬಂಧ ಪಟ್ಟದ್ದು, ಈಗ ನಾನು ಓದುತ್ತಿದ್ದೇನೆ ತಾವು ಓದಿದ್ದು "Provided that no such Motion shall be made until copies of the Bill have been made available for the use of the Members and that any Member may object to any such Motion being made unless copies of the Bill have been so made available two days before the day on which the Motion is made. "

ಇದು ಸಬ್‌ಕ್ಲಾಜ್ (3) ಕ್ಕೆ ಸಂಬಂಧಪಟ್ಟದ್ದು ಸಬ್‌ಕ್ಲಾಜ್ (3) ಎಂದರೆ

That is referred to Joint Select Committee of the House ವಗೈರೆ. it is after the introduction. It is very clear. Provided that no such Motion as is referred to Clause - III. Clause III is referred to the Joint Select Commettee of the House with the conourrence of the ..... It is very clear Mr. Ekanthaiah.

ಶ್ರೀ ಹೆಚ್. ಏಕಾಂತಯ್ಯ :- ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆಂದು ಹೇಳಿದೆ. ಪೂರ್ಣ ಹೇಳುವವರೆಗಾದರೂ ಕೇಳಿ. ನೀವು ಹೇಳುತ್ತಿರುವುದು ನಾನು ಹೇಳುತ್ತಿರುವಂಥ ವಿಚಾರಕ್ಕೆ ಸಂಬಂಧಪಟ್ಟಿದ್ದಲ್ಲ .It is only after it is introduced. when you take it for consideration. ತಾವು ಹೇಳುವ ಮಾತು ಸರಿ. ನಾನು ಅದಕ್ಕಿಂತ ಮೊದಲು ....

ಶ್ರೀ ಎಂ. ವೈ. ಘೋರ್ಪಡೆ :- ಇಂಟರ್‌ಡಕ್ಷನ್‌ಗೆ ಅನ್ವಯಿಸುವುದಿಲ್ಲ. ಇಂಟರ್‌ಡಕ್ಷನ್ ಆದನಂತರ ಕೆಲವು ಕ್ರಮ ಏನಿದೆ for instance, referring to the Joint Select Committee. ಅಂತಹ ವಿಷಯಗಳು ಬಂದಾಗ ಎರಡು ದಿನದ ಪ್ರಶ್ನೆ ಇದೆ. ಇಂಟರ್‌ಡಕ್ಷನ್ ಎರಡು ದಿನ ಮುಂಚಿತವಾಗಿ ಕಾಪೀಸನ್ನು ಕೊಟ್ಟಿರಬೇಕೆಂಬುದು ಈ ಪುಸ್ತಕದಲ್ಲಿ ಇಲ್ಲ. ನಮ್ಮ ಈ ಮನೆಯ ಸಂಪ್ರದಾಯದಲ್ಲಿಯೂ ಇಲ್ಲ. ಅಧ್ಯಕ್ಷರ ರೂಲಿಂಗ್ ಪ್ರಕಾರವೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ :- ನಾನು ಇನ್ನು ಮುಗಿಸಿಲ್ಲ. ನಾನು ಮಾತನಾಡುತ್ತಿದ್ದಾಗ ಪೂರಕವಾಗಿ ಮಾನ್ಯ ಸಚಿವರು ಕೂಡ ಹೇಳಿದ್ದಾರೆ, ನಾನು ಈಗಾಗಲೇ ಹೇಳಿದ್ದೇನೆ ಇಂಟರ್‌ಡಕ್ಷನ್ ಸ್ಟೇಜ್‌ನಲ್ಲಿ ಎರಡು ದಿವಸದ ಅವಕಾಶವನ್ನು ಏನು ಕೇಳಿದ್ದೀರಿ Alright. Take it for granted that practice is there. ನಮ್ಮ ಸಚಿವರು ಹೇಳಿದ ರೂಲ್ 80 ಪ್ರಕಾರ ಆ ಪ್ರಾಕ್ಟೀಸ್ ನಮ್ಮಲ್ಲಿ ಇಲ್ಲ. Specifically we have not provided.. ಇಂಟರ್‌ಡಕ್ಷನ್ ಟೈಂನಲ್ಲಿ ಎರಡು ದಿವಸ ಬೇಕು ಎಂಬ ಪ್ರಾಕ್ಟೀಸ್ ನಿಯಮ 80 ರಲ್ಲಿ ನಾವು ಸ್ಪೆಸಿಫಿಕ್ ಆಗಿ ಬಿಟ್ಟಿದ್ದೇವೆ. ಆದರೆ ರೂಲ್ 83ರಲ್ಲಿ ಅದು ಇದೆ. ಕನ್ಸಿಡರೇಷನ್‌ಗೆ ತರುವಾಗ ಎರಡು ದಿವಸದ ಅವಕಾಶವನ್ನು ಕೊಡಬೇಕೆಂದು ರೂಲ್ 83ರಲ್ಲಿ ಇದೆ. We are at the stage of 80. Even technical objection is not correct.

ಪಾರ್ಲಿಮೆಂಟ್‌ನಲ್ಲಿ ಇದು ಇದೆ ಅಂತ ಕೌಲ್ ಅಂಡ್ ಶಕ್‌ದಾರ್‌ನಲ್ಲಿ ಕಾಣುತ್ತಿದೆ. ಕನ್ಸಿಡರೇಷನ್ ಸ್ಟೇಜ್‌ನಲ್ಲಿ ಎರಡು ದಿವಸ ಕೊಡಬೇಕೆಂದು ಇದೆ. Technically this objection will not stand .ಇನ್ನೂ ಎರಡನೆಯದು ಏಳು ದಿವಸಗಳ ನೋಟೀಸ್ ಕೊಡಬೇಕೆಂದು ಹೇಳಿದರೂ ಕೂಡ ಅದನ್ನು ವೇವ್ ಮಾಡಿಕೊಂಡು ಇಂಟರ್‌ಡಕ್ಷನ್ ಮಾಡಿದಂತಹ ಪದ್ಧತಿ ಬಹಳ ಒಳ್ಳೆಯ ಪದ್ಧತಿ ಎಂದು ನಾನು ಸರ್ಟಿಫಿಕೇಟ್ ಅನ್ನು ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಅಂತಹದ್ದು ಇದೆ, ಅನೇಕ ನೋಟೀಸ್‌ಗಳನ್ನು ವೇವ್ ಮಾಡಿಕೊಂಡು ಕೊಟ್ಟಿದ್ದು ಇದೆ. ಇದು ಬಹಳ ಮಹತ್ವದ ಬಿಲ್. ಮಹತ್ವದ ಬಿಲ್ ಆಗಿರುವುದರಿಂದ ಅನೇಕ ಕರೆಕ್ಷನ್‌ಗಳು ಇವೆ. ಇಷ್ಟು ಕಡಿಮೆ ಸಮಯದಲ್ಲಿ ಮಹತ್ವದ ಬಿಲ್‌ನ್ನು ಇವತ್ತು ಅದಷ್ಟು ಪರಿಷ್ಕರಣೆಯನ್ನು ಮಾಡಿಕೊಂಡು ತಂದಿದ್ದೇವೆ. ಏಕೆಂದರೆ ಹೆಚ್ಚು ಅವಕಾಶ ಸಿಕ್ಕಿದರೆ ತಮ್ಮ ಸಲಹೆಯನ್ನು ಸಂಪೂರ್ಣವಾಗಿ ಗ್ರಹಿಸಿ ಬದಲಾವಣೆಯನ್ನು ಮಾಡದೆ ಮುಕ್ತ ಹೃದಯ ನಮ್ಮಲ್ಲಿ ಇದೆ. ಇದರ ಬಗ್ಗೆ ನಾವು ನೀವು ಕಾಂಪರ್‌ಮೈಸ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಉಳಿದ ವಿಚಾರಗಳಲ್ಲಿ ವ್ಯಾಪಕವಾದಂತಹ ಚರ್ಚೆಯಾಗಲಿ, ತಾವು ಏನು ಸೂಚನೆಯನ್ನು ಕೊಡುತ್ತೀರೋ ಆ ಸೂಚನೆಯ ಬಗ್ಗೆ ವ್ಯಾಪಕವಾಗಿ ಚರ್ಚೆಯಾದ ಮೇಲೆ ಅದನ್ನು ಸೂಕ್ತವಾಗಿ ಬದಲಾವಣೆ ಮಾಡಲಿಕ್ಕೆ ಯಾವಾಗಲೂ ಕೂಡ ಸಿದ್ಧರಿದ್ದೇವೆ. ಆದ್ದರಿಂದ ನಾವು ಇದಕ್ಕೆ ಅಡ್ಡಿ ಬರುತ್ತಿಲ್ಲ. We have an open mind. ಆದರೆ ಇಂಟರ್‌ಡಕ್ಷನ್ ಸ್ಟೇಜ್ ಆಗಲಿ, ಕನ್ಸಿಡರೇಷನ್ ಸ್ಟೇಜ್‌ನಲ್ಲಿ suppose ನಾಳೆ ತೆಗೆದುಕೊಳ್ಳಬೇಕೆಂದು ಹೇಳಿದರೆ we are prepared ನಾಳೆ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳಿ. ನಾಳೆ ಬೇಕಾದರೆ ಇಂಟರ್‌ಡಕ್ಷನ್ ಆಗಲಿ, ನಾಳೆ ಬೇಕಾದರೆ ತಾವು ಚರ್ಚೆ ಮಾಡಿ, ನನಗೇನೂ ಅಡ್ಡಿ ಇಲ್ಲ. ನಾಳೆ ಅಲ್ಲ, ಸೋಮವಾರ ಮಾಡಿ ಅಂತ ಹೇಳಿದರೆ ಏನು ಅರ್ಥವಾಗುತ್ತದೆ ಅಂದರೆ ನಮಗೆ ಚರ್ಚೆಗೆ ಅವಧಿ ಕಡಿಮೆಯಾಗುತ್ತದೆ. ನಮ್ಮ ಸದುದ್ದೇಶ ಏನೆಂದರೆ ಈ ಬಿಲ್ ಡಿಸ್‌ಕರ್ಷನ್ ಆಗಬೇಕು ಒಂದು, ಎರಡನೆಯದಾಗಿ ಆದಷ್ಟು ಜಾಗ್ರತೆ ನಾವು ಚುನಾವಣೆಯನ್ನು

ಮಾಡಬೇಕು. ಈ ತಿಂಗಳು 8ನೇ ತಾರೀಖಿನೊಳಗೆ ಆಗದಿದ್ದರೆ ಏನಾಗುತ್ತದೆ ಅಂದರೆ ಚುನಾವಣೆ ಮುಂದುವರಿಯುತ್ತದೆ. ತಾವು ಚುನಾವಣೆಯನ್ನು ಮಾಡಲಿಲ್ಲ ಅಂತ ಹೇಳುತ್ತೀರಿ, ಸಂವಿಧಾನದ ಅಮೆಂಡ್‌ಮೆಂಟ್ ಆಗಿರುವಾಗ ಸಂವಿಧಾನದ ಅಮೆಂಡ್‌ಮೆಂಟ್‌ನ್ನು ಬಿಟ್ಟು ನಾವು ಪ್ರಸ್ತುತ ನಮ್ಮ ಕಾಯಿದೆಯ ಪ್ರಕಾರ ಚುನಾವಣೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಮಾಡಿದರೆ ಏನಾಗುತ್ತದೆ ಅಂದರೆ ಕೋಟ್ಯಾಂತರ ರೂಪಾಯಿಗಳ ಚುನಾವಣೆ ಪುನಃ ಖರ್ಚಾಗುತ್ತದೆ ಚುನಾವಣೆಯನ್ನು ಆದಷ್ಟು ಬೇಗ ಮಾಡಬೇಕೆಂದು ನಮ್ಮ ಮನಸ್ಸಿನಲ್ಲಿಯೂ ಇದೆ, ತಮ್ಮ ಮನಸ್ಸಿನಲ್ಲಿಯೂ ಇದೆ. ನಾನು ಆ ಮನಸ್ಸಿನ ಬಗ್ಗೆ ಸಂಶಯ ಮಾಡುತ್ತಿಲ್ಲ. ನಾವು ಗಂಭೀರವಾಗಿ ಕುಳಿತುಕೊಂಡು ಇದರ ವಿಚಾರದ ಬಗ್ಗೆ ಚರ್ಚೆ ಮಾಡೋಣ. ಎಷ್ಟೇ ಗಂಟೆಯಾದರೂ ಇಲ್ಲಿ ಕುಳಿತುಕೊಳ್ಳೋಣ. ಇದರ ಬಗ್ಗೆ ಚರ್ಚೆ ಮಾಡುವುದರಿಂದ ನಮಗೆ ಕೀರ್ತಿ ಅಲ್ಲ ಇಡೀ ಸದನಕ್ಕೆ ಕೀರ್ತಿ ಬರುತ್ತದೆ. ಇಡೀ ರಾಷ್ಟ್ರದಲ್ಲಿ ಸಂವಿಧಾನದ ತಿದ್ದುಪಡಿ ಆದ ಮೇಲೆ ಪ್ರಥಮವಾಗಿ ಒಂದು ಮಾಡಲ್ ಆಗಿ ಒಂದು ಮಸೂದೆಯನ್ನು ರಾಷ್ಟ್ರಕ್ಕೆ ಕೊಟ್ಟರೆ ಅದು ರಾಷ್ಟ್ರಕ್ಕೆ ಒಂದು ದೊಡ್ಡ ಕೊಡುಗೆ. ಏಕೆಂದರೆ ನಾನು ಒಪ್ಪುತ್ತೇನೆ. ಏಕೆಂದರೆ ಬರೀ ಡಿಫೆಕ್ಟ್ಸ್ ಬಗ್ಗೆ ನನ್ನ ಅನುಭವದಲ್ಲಿ ಹೇಳುವುದಾದರೆ 5-6 ವರ್ಷಗಳ ಕಾಲದಲ್ಲಿ ಒಂದು ವಿಕೇಂದ್ರಿಕರಣ ವ್ಯವಸ್ಥೆಯನ್ನು ತಮ್ಮ ಸರ್ಕಾರ ಇರುವಾಗ ತಂದಿದ್ದೀರಿ ನಾನು ಬಹಳ ಮೆಚ್ಚುಗೆ ಸೂಚಿಸುತ್ತೇನೆ. There may be some defects. ಆದರೆ ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಒಂದು ನವ್ಯವಾದಂಥ ಹೊಸ ಪ್ರಯೋಗ ನಡೆಯುತ್ತಿದೆ. ಇವತ್ತು ಅದಕ್ಕೆ ಸಂವಿಧಾನದ ಸ್ವರೂಪ ಕೊಟ್ಟು ಅದಕ್ಕೆ ಸಂವಿಧಾನಾತ್ಮಕವಾದ ಒಂದು ಬೆಂಬಲ ಕೊಡುವಂತಹ ದೊಡ್ಡ ಹಿನ್ನೆಲೆಯಲ್ಲಿ ಈ ಚಾರಿತ್ರಿಕ ಸನ್ನಿವೇಶದಲ್ಲಿ ನಾವು ಯಾಂತ್ರಿಕವಾಗಿ ನಾಳೆ ಮಾಡಿ ಇನ್ನೊಂದು ದಿವಸ ಮಾಡಿ ಎಂದರೆ, ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಮಾಡಿದರೆ ಅದು ಅಷ್ಟು ಸಮಂಜಸ ಎಂದು ನನಗನಿಸುವುದಿಲ್ಲ. ಇಂಟ್ರಡಕ್ಷನ್ ತಾಂತ್ರಿಕವಾಗಿ ನಮ್ಮ ನಿಯಮಗಳ ಪ್ರಕಾರ ಯಾವ ಅಡ್ಡಿಯೂ ಕೂಡ ಇಲ್ಲ. ನಮ್ಮ ರೂಲ್ ಇಲ್ಲಿ ಇರುವಾಗ ನಾವು ಪಾರ್ಲಿಮೆಂಟ್ ರೂಲ್‌ನ್ನು ಇಲ್ಲಿ ತರಬೇಕಾದಂಥ ಅವಶ್ಯಕತೆ ಇಲ್ಲ. Even that two days notice, we have already waived ಇವುತ್ತುಬೇಡ ನಾಳೆ ಚರ್ಚೆ ಮಾಡೋಣ ಎಂದರೆ ನಾವು ಸಿದ್ಧರಿದ್ದೇವೆ. ಇವತ್ತೇ ಚರ್ಚೆ ಪ್ರಾರಂಭ ಮಾಡಬೇಕು ಎನ್ನುವ ಮೊಂಡು ಹಠ ಕೂಡ ನಾವು ಇಟ್ಟು ಕೊಳ್ಳುವುದಿಲ್ಲ ಇಂಟರ್‌ಡಕ್ಷನ್ ಆಗಲಿ. Let the introduction be over. ಇಂಟರ್‌ಡಕ್ಷನ್‌ಗೆ ಏನು ಅಡ್ಡಿ ಇದೆ ? ಆದುದರಿಂದ ಅಧ್ಯಕ್ಷರೇ ಇಂಟರ್‌ಡಕ್ಷನ್‌ಗೇ ಸುಮ್ಮನೆ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ. Please allow the introduction because there is no technical obstruction. Our Rule is very clear. If any procedure requires some interpretation, I can understand. When there is no scope for interpretation so far as our Rule is concerned,which governs us, ಸನ್ಮಾನ್ಯ ಏಕಾಂತಯ್ಯನವರು ಹಿರಿಯ ಸದಸ್ಯರು. ಅವರು ಕಾನೂನು ಪಂಡಿತರಾಗಿದ್ದಾರೆ. ಈಗ ಈ ರೂಲ್ ಪ್ರಕಾರ ನಾವು ನಡೆಯುವುದಾದರೆ ತಿದ್ದುಪಡಿ ಮಾಡಬೇಕು. ಪಾರ್ಲಿಮೆಂಟ್ ರೂಲ್ ಪ್ರಕಾರ ನಮ್ಮದು ಇರಲಿ ಎಂದು ತಿದ್ದುಪಡಿ ಮಾಡಿದರೆ ಮೇಲೆ ಅವರ ಆಕ್ಷೇಪಣೆಯನ್ನು ನಾವು ಒಪ್ಪುತ್ತೇವೆ. ಆದರೆ ಈಗ we are absolutely governed by the written Rule here., which is not open for introduction ಆದುದರಿಂದ ಇಂಟರ್‌ಡಕ್ಷನ್‌ಗೆ ದಯವಿಟ್ಟು ಅವಕಾಶ ಕೊಡಿ ಆಮೇಲೆ ಡಿಸ್‌ಕಷನ್ ಅದು ಇವತ್ತೇ ಆದರೆ ಒಂದು ದಿವಸ ಹೆಚ್ಚು ಸಿಗುತ್ತದೆ. ಇವತ್ತು ಆಗದೆ ನಾಳೆ ಆದರೆ ಒಂದು ದಿವಸ ಕಡಿಮೆ ಆಗುತ್ತದೆ ಅಷ್ಟೆ.

ಶ್ರೀ ಆರ್. ವಿ. ದೇಶಪಾಂಡೆ :- ಮುಖ್ಯ ಮಂತ್ರಿಯವರಿಗೆ ಸ್ವಲ್ಪ ತಪ್ಪುತಿಳುವಳಿಕೆಯಾಗಿದೆ. ಇವತ್ತು ಬಿಲ್ ಡಿಸ್‌ಕಷನ್‌ಗೆ ಇಲ್ಲವೇ ಇಲ್ಲ it is only for introduction.

ಶ್ರೀ ಎಂ. ವೀರಪ್ಪಮೊಯಿಲಿ :- ಮಾಡಿ ಬಿಡಿ ಹಾಗಾದರೆ

ಶ್ರೀ ಆರ್. ವಿ. ದೇಶಪಾಂಡೆ :- No, No, ನಾವು ಹೇಳಿದ್ದುದು ತಮಗೆ ಅರ್ಥವಾಗಿಲ್ಲ. ಈ ಬಿಲ್ ಇಲ್ಲಿ ಇಂಟರ್‌ಡ್ಯೂಸ್ ಆಗಬಾರದು, ಚರ್ಚೆಯಾಗಬಾರದು ಎನ್ನುವ ಉದ್ದೇಶ ನಮ್ಮದಲ್ಲ. ಚರ್ಚೆ ಆಗಬೇಕು ಅಷ್ಟೇ ಅಲ್ಲ. ಇದರ ಬಗ್ಗೆ ವಿವರವಾಗಿ ಚರ್ಚೆ ಆಗಿ ಸಾಕಷ್ಟು ಟೈಮ್ ಕೊಡಬೇಕು ಎನ್ನುವ ಉದ್ದೇಶ ನಮಗೆ ಇದೆ ಅದೇ ಪ್ರಕಾರ ನಾವು ಹೇಳಿದ್ದೇವೆ. ಏಕೆಂದರೆ ಅದರ repurcussions ವಿಚಾರ ನಾವು ಮಾತನಾಡಬೇಕು, ತಾವು ಹೇಳಿದ ಹಾಗೆ ಇದು ಒಂದು ನಮ್ಮ ಕೊಡುಗೆ. ನಿಜವಾಗಿಯೂ ನಮಗೆ ಹೆಮ್ಮೆ ಇದೆ. ರಾಮಕೃಷ್ಣ ಹೆಗಡೆ ಸರ್ಕಾರ ಇದ್ದಾಗ ನಾವು ಒಂದು ಕೊಡುಗೆ ನೀಡಿ ಇಡೀ ದೇಶಕ್ಕೆ ಒಂದು ಮಾದರಿಯಾಗಿದ್ದೆವು. Ideal ಬಿಲ್ ಜಾರಿಗೆ ತಂದಿದ್ದೇವೆ. ಅದಕ್ಕೆ ಸಂವಿಧಾನದಲ್ಲಿ ಏನು ತಿದ್ದುಪಡಿಯಾಗಿದೆ ಅದರ ಪ್ರಕಾರ ಅಮೆಂಡ್‌ಮೆಂಟ್ ತರುತ್ತಿದ್ದೇವೆ. ಇಲ್ಲಿ ಮುಖ್ಯವಾಗಿ ಹೇಳುವುದೇನೆಂದರೆ ಸೆಕ್ಷನ್ 80 ನೋಡಿ ಅದರಲ್ಲಿ "Provided that where a Motion is opposed, on the ground that the bill initiated is outside the legislative competence, of the House, the Speaker may permit a discussion thereon ". Suppose at the introduction stage, if there is some legal objection, it could be done at this stage. ಅದನ್ನು ಮಾಡಬೇಕಾಗಿದ್ದರೆ ಬಿಲ್‌ನ್ನು ಕೊಡಬೇಕಲ್ಲ. ನಮಗೆ ಗೊತ್ತಾಗಬೇಕಲ್ಲ. ಇಷ್ಟು ಕಾಲ ಇದೆ ಎಂದು Without knowing it, how can we oppose it ? ಹಾಗಾಗಿ ಮುಂಚೆ ಕೊಡಬೇಕಾಗುತ್ತದೆ. ಮುಂಚೆ ಕೊಟ್ಟರೆ ನಾವು ಸ್ಟಡಿ ಮಾಡಿ ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಏನಾದರೂ ಲೀಗಲ್ ತೊಂದರೆ ಇದ್ದರೆ, ಕಾಪೀಸ್ ತೊಂದರೆ ಇದ್ದರೆ ಅದರ ಸಲುವಾಗಿ ಕೊಡಬೇಕಾಗುತ್ತದೆ. ಬೇರೆ ಯಾವ ಕಾರಣವೂ ಇಲ್ಲ.

Sri M.Y. Ghorpade :- Sir, It is My duty to point out that the bill we are bringing is hundred percent within the legel competence of Karnataka legislature.

ಶ್ರೀ ಹೆಚ್. ಏಕಾಂತಯ್ಯ :-ಹಾಗಾದರೆ ನಾವು ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಸ್ವಾಮಿ, ಸರ್ಕಾರದ ಪರವಾಗಿ ತಾವು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ :- ಎಲ್ಲರೂ ಒಪ್ಪಿಕೊಂಡರೆ Please allow the introduction.

ಶ್ರೀ ಹೆಚ್. ಏಕಾಂತಯ್ಯ :-ನೀವು ಹೇಳುವ ಪ್ರಕಾರ ಇಲ್ಲ. ಆದರೆ ನಮ್ಮ ನಿಯಮಾವಳಿಗಳ ಪ್ರಕಾರ ಇದೆ. ಆ ಅಧಿಕಾರವನ್ನು ಚಲಾಯಿಸುವುದಕ್ಕೆ ಹೇಳಿದೆ ಹೊರತು.

Sri M.Y. Ghorpade :- It is very cler that...

ಅಧ್ಯಕ್ಷರು :- ನಿನ್ನೆ ಮಾನ್ಯ ಮಂತ್ರಿಗಳು ನನ್ನ ಹತ್ತಿರ ಬಂದು ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ನನಗೆ ಅವಕಾಶ ಕೊಡಿ ಎಂದು ಕೇಳಿದಾಗ ಆ ಪುಸ್ತಕವನ್ನು ನೋಡಿದಾಗ ಕೆಲವೊಂದು ಲೋಪದೋಷಗಳು ನನಗೆ ಕಂಡುಬಂದ ತಕ್ಷಣ ಅವುಗಳನ್ನು ಸರಿಪಡಿಸಿ, ರಾತ್ರಿಯೆಲ್ಲಾ ಕುಳಿತುಕೊಂಡು ಮತ್ತೆ ಪ್ರಿಂಟ್ ಮಾಡಿಸಿ ನಾಳೆ ಇಂಟ್ರಡಕ್ಷನ್ ಮಾಡೋಣ ಎಂದುಹೇಳಿದ್ದೆ. ಲೀಗಲ್ ಡಿಪಾರ್ಟ್‌ಮೆಂಟ್ ಜನರನ್ನು ಕೂರಿಸಿ ಅದನ್ನು ತಯಾರು ಮಾಡಿಸಿದ್ದೇನೆ. ಅದಕ್ಕೆ ನನಗೆ ತಿಳಿದ ಮಟ್ಟಿಗೆ ಇಂಟ್ರಡಕ್ಷನ್ ಮಾಡಬಹುದು.

ಶ್ರೀ ಹೆಚ್. ಏಕಾಂತಯ್ಯ :- ಅಲ್ಲಾ ಸ್ವಾಮಿ ನನಗೆ ಅಧಿಕಾರ ಇದೆ ಚರ್ಚೆ ಮಾಡುವುದಕ್ಕೆ ಕಾಪೀಸ್ ಕೊಡಬೇಕೆಂದು ಹೇಳಿದರೆ, ಕೊಡುವುದು ಬೇಡವೇ ?

ಅಧ್ಯಕ್ಷರು :- ಈಗ ಕೊಟ್ಟಿದ್ದಾರಲ್ಲ.

ಶ್ರೀ ಹೆಚ್. ಏಕಾಂತಯ್ಯ :- ಈಗಲೇ ಕೊಟ್ಟರೆ ನಾವು ಈಗ ಓದಿಕೊಂಡು ಲೆಜಿಸ್‌ಲೇಟಿವ್ ಕಾಂಪಿಟೆನ್ಸ್

ಇದೆ ಎಂದು ಹೇಳಬೇಕೇ ? As per rule 80,"if the Motion is opposed, the Speaker may permit a brief Explanatory Statement from the Member who opposes ಆಯಿತು. Provided that where the Motion is opposed, on the ground that the Bill is outside the Legislative competence, the Speaker may permit a full discussion there on." "Full discussion there on" ಎಂದರೆ the competence of legislation ಮಾಡಬೇಕಾಗಿದ್ದರೆ ಈ ಹಂತದಲ್ಲೇ ಮಾಡಬೇಕು, ಇಂಟ್ರಡ್ಯೂಸ್ ಆದ ಮೇಲೆ ನಾವು ಲೆಜಿಸ್ಲೇಟಿವ್ ಕಾಂಪಿಟನ್ಸ್ ಬಗ್ಗೆ ಚರ್ಚೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದನ್ನು ನಾವು ಕೌಲ್ ಅ್ಯಂಡ್ ಶಕ್ದರ್ ಓದಿ ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ನಾವು ಕೌಲ್ ಅಂಡ್ ಶಕ್ದರ್ ಓದಬೇಕಾಗಿಲ್ಲ ನಮ್ಮ ''ಕಾನ್ಸಿಟಿಟ್ಯೂಷನ್ ಆಫ್ ಇಂಡಿಯಾ'' ಇದೆ ಅದನ್ನು ಓದಿದರೆ ಸಾಕು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :- ಕಾಲ್ ಅಂಡ್ ಶಕ್ದರ್ ಓದಬೇಕಾಗಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು ಆದರೆ ಗೂಲ್ಸ್ ಆಫ್ ದಿ ಹೌಸ್ ಇದೆ ....

Sri M. Veerappa Moily :- It is the question of a legal competence, purely, absolutely it is technical. It is not based upon facts. It is absolutely a matter of law. ಈ ಪಂಚಾಯಿತ್‌ರಾಜ್ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ನಮಗೆ ಕಾಂಪಿಟೆನ್ಸ್ ಇದೆಯೋ ಇಲ್ಲವೋ it is a very limited question. Rest ofthe questions, we need go into it. It is not the question of a procedure, or a Legislative procedure, or a parliamentary procedure, or a Parliamentary Practice, it does not come under that ambit. It purley comes under the ambit of the Constitutional Provision. Whether we have a legal competence on this subject, or on the bill which deals with a particular subject the list (2) state list (5). "Local Government that is to say,the constitution and powers of Municipal corporation,Improvement Trust, District Board, Mining Settlement Authorities, other Local Authorities, for the purpose of Local Self Government of village administration. It is absolutely in the State List. This pertains to the Local Self Govenrment. There is a total absolute, unambiguous, legal competence to legislate this Bill. ಆದುದರಿಂದ ಆ ಲೀಗಲ್ ಕಾಂಪಿಟೆನ್ಸ್ ಪ್ರಶ್ನೆ ಪ್ರಾವಿನೋ ಇದಕ್ಕೆ ಅಪ್ಲೈ ಆಗುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :- ತಾವು ಹೇಳಿರುವುದಕ್ಕೆ ಎರಡು ಕ್ಲ್ಯಾರಿಫಿಕೇಷನ್ ಕೊಡಬೇಕಾಗಿದೆ. ಒಂದು ನಿಮ್ಮ Rules of the House ಗೆ ಸೀಮಿತವಾಗಿ ನೀವು ಇಂಟ್ರಿಪೀಟ್ ಮಾಡಲಿಕ್ಕೆ ಸಾಧ್ಯವೇ ಇಲ್ಲ. Because you have to trace your rules to the rules of the Loka Sabha and the rules of the House of Commons. ಇದು ಸಂವಿಧಾನದ ಹಕ್ಕು. ಎರಡನೇಯದು, ಲೀಗಲ್ ಕಾಂಪಿಟೆನ್ಸ್ ಇದೆ ಹೌದು State list ನಲ್ಲಿ ಇದೆ. but it does not mean that you can pass an Un-constitutional law under that subject. You have to pass a

Constitutional Law under the subject in the State List. ನೀವು ಸಂವಿಧಾನ ಬದ್ಧವಾಗಿ ಕಾನೂನು ಮಾಡುವುದಕ್ಕೆ ನಿಮಗೆ ಕಾಂಪಿಟೆನ್ಸ್ ಉಂಟು, ಸುಮ್ಮನೆ ಪಟ್ಟಿಯಲ್ಲಿ ಇದೆ ಎಂದರೆ ಮುಗಿಯಲಿಲ್ಲ. You have to pass the Constitutional law under the State List. You cannot pass an Un-constitutional Law under the State List. ಇದರ ಬಗ್ಗೆ ಕಾಮೆಂಟ್ ಮಾಡಬೇಕಾದರೆ ನಮಗೆ ಅವಕಾಶ ಇದೆ. ಅದು ನಮ್ಮ ಹಕ್ಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ತಾವು ತಮ್ಮ ಹಕ್ಕಿನ ಬಗ್ಗೆ ಹೇಳಿದಿರಿ ಅದಕ್ಕೆ ನಾನು ಅಡ್ಡ ಬರುವುದಿಲ್ಲ. ಪ್ರಶ್ನೆ ಏನೆಂದರೆ I agree with you. After all any question could be debated. Even in the absence of a Constituional amendment, we are competent to do it. We are only guided by it for the present ಕಾನ್ಸಿಟಿಟ್ಯೂಷನ್ ಬಂದ ಮೇಲೆ we get a sanction of the Constitution. ಅಷ್ಟೇ ಹೊರತು ಅದರಲ್ಲಿ ಬೇರೆ ಏನೂ ಇಲ್ಲ Even if the President has not assented to that, we are competent to do it. We are fully competent to do it because it is our area of legislation. ಅದನ್ನೆಲ್ಲಾ ನಾವು ಸ್ಟಡಿ ಮಾಡಿಯೇ ಹಾಕಿದ್ದೇವೆ. ಪ್ರೊಫೆಸರರು ಏನು ಹೇಳಿದರು ಎಂದರೆ ಕಾನ್ಸಿಟಿಟ್ಯೂಷನ್ಸ್ ಅಮೆಂಡ್‌ಮೆಂಟ್‌ಗೆ ಇನ್ನೂ ಪ್ರೆಸಿಡೆಂಟ್ ಅಸ್ಸೆಂಟ್ ಸಿಕ್ಕಿಲ್ಲ ಅದು ಫೋರ್ಸ್‌ಗೆ ಬರಲಿಲ್ಲ ಎಂದು. Alright, even if it does not come, we are conscious about it Even if it does not come, are we competent to legislate? We may get inspiration from that constitutional amendment or we may get inspiration by some debate that is taken place in the Lok Sabha and of course we get the sanctity of the constitution after it is assented to and after it comes into effect. For the present, it is absolutely constitutional, because List-II of the State List clearly empowers the State Legislature to make law. For that I don't think there is any ambiguity. So, in view of the legal competency, it is absolutely constitutional and it is within the ambit and it does not require even the amendment of the constitution. We have drawn inspiration from them so that ನಾಳೆ ಯಾವ ತರಹದ ಎಂಬಾರಸ್‌ಮೆಂಟ್ ನಮಗೆ ಆಗುವುದಿಲ್ಲ. ಈ ದೃಷ್ಟಿಯಿಂದ since both the House have pased it, it is only pending for the assent of the president. Suppose, worst come worsh if there is a change or president suggests some changes and sends back the bill, you know, we are entitled to pass it and, some changes if any caused because of the back reference by president to the Lok Sabha or Rajya Sabha then it is for us, of course, when the constitutional amendment comes we have to incorporate any changes if any ಆದ್ದರಿಂದ ಇದರ ಬಗ್ಗೆ ಪ್ರೆಸಿಡೆಂಟ್ ಅಸೆಂಟನ್ನು ನಾವು ಕಾಯಬೇಕಾದಂಥ ಅವಶ್ಯಕತೆ ಇಲ್ಲ. We are doing it because we are anxious so that the popular local bodies may come into effect. There is nothing malafide in our intention to hurry up. This is absolutely

bonafide. ಜನಗಳ ದೃಷ್ಟಿಯಲ್ಲಿ ಅವರಿಗೆ ಅಧಿಕಾರವನ್ನು, ಜನತೆಗೆ ಅಧಿಕಾರವನ್ನು ಈ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ತಕ್ಷಣ ಕೊಡಬೇಕೆಂಬ ಒಂದು ಸದುದ್ದೇಶ ನಮ್ಮಲ್ಲಿ ಇದೆಯೇ ಹೊರತು ಇದರಲ್ಲಿ ಏನೋ ಒಂದು ಆಕಸ್ಮಾತ್ತಾಗಿ ಚರ್ಚೆ ಇಲ್ಲದೆ ಪಾಸ್ ಮಾಡಿಕೊಂಡು ಹೊರಟುಹೋಗಬೇಕೆಂಬ ಆ ಒಂದು ದುರುದ್ದೇಶ ನಮ್ಮಲ್ಲಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ತಾವೇ ಒಂದು ಮಾತನ್ನು ಹೇಳಿದಿರಿ. ನೀವು ಬುದ್ಧಿವಂತರ ಮಾತನ್ನು ಕೇಳಿದ್ದೀರಾ. ರೈತರ ಮಗನ ಮಾತನ್ನು ಸ್ವಲ್ಪ ಕೇಳಿ. ತಾವು ಮಾತನಾಡಬೇಕಾದರೆ ಒಂದು ಮಾತನ್ನು ಹೇಳಿದಿರಿ. ನಾನು ಈ ಒಂದು ಬಿಲ್ಲನ್ನು ತರಿಸಿಕೊಂಡು ನೋಡಿದೆ.

ಶ್ರೀ ಸಿ. ಭೈರೇಗೌಡ :- ರೈತರು ಬುದ್ಧಿವಂತರಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಸ್ವಲ್ಪ ದಡ್ಡರು ಎಂದು ಜನರು ಅಂದು ಕೊಂಡಿದ್ದಾರೆ.

ಶ್ರೀ ಸಿ. ಭೈರೇಗೌಡ :- ಅದನ್ನು ನಿವೇಕೆ ಒಪ್ಪುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನಂತೂ ದಡ್ಡ. ಸನ್ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಎಂದರೆ ತಾವು ನಮ್ಮಸದನದಲ್ಲಿತಾವು ಒಂದು ಗಂಭೀರವಾದ ವಿಷಯದ ಬಗ್ಗೆ ಬೆಳಕಿಗೆ ತಂದಿದ್ದೀರಿ. ಈ ಬಿಲ್ಲನ್ನು ನಾನು ತರಿಸಿಕೊಂಡು ನೋಡಿದೆ. ಅನೇಕ ಕೊರತೆಗಳು ಅದರಲ್ಲಿ ಕಂಡುಬಂದುವು ಲೀಗಲ್ ಆಸ್ಪೆಕ್ಟ್‌ನಲ್ಲಿ, ರಾತ್ರೀ ಇಡೀ ಲೀಗಲ್ ಡಿಪಾರ್ಟ್‌ಮೆಂಟ್ ಜೊತೆಗೆ ಅವರನ್ನುಕೂಡಿಸಿ ಕೆಲವು ತಿದ್ದುಪಡಿಗಳನ್ನು ಮಾಡಿಸಿ ನಂತರ ಇದನ್ನು ಇಂಟ್ರಡ್ಯೂಸ್ ಮಾಡಿಸಲು ನಾನು ಹೇಳಿದ್ದೇನೆ ಅಂತ ಅಂದರೆ ತಮಗೆ ಕೆಲವು ಸಂಗತಿಗಳು ಹೊಳೆಯಿತು, ಅಂದರೆ ಈ ಸರ್ಕಾರಕ್ಕೆ ಅಧಿಕಾರಿಗಳು ಏನು ಇದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಹೊರಟಿದ್ದರೊ ಉದ್ದೇಶಪೂರ್ವಕವಾಗಿಯೊ ಹೊಳೆಯದೋ ಕೆಲವು ಕೊರತೆಗಳು ಇದ್ದವು, ಅದನ್ನು ಸರಿಮಾಡಿಸುವಂಥ ಪ್ರಯತ್ನವನ್ನು ಮಾಡಿದ್ದೀರಿ. ಮಾನ್ಯ ಏಕಾಂತಯ್ಯನವರ ಉದ್ದೇಶ ಏನು, ಇದನ್ನು ಇಂಟ್ರಡ್ಯೂಸ್ ಮಾಡಬಾರದು ಎಂದಲ್ಲ, ಎರಡು ದಿವಸ ಮುಂಚೆ ಈ ಬಿಲ್ ನಮ್ಮ ಕೈಗೆ ಸಿಕ್ಕಿದರೆ ನಾಳೆ ಯಾರೂ ಅಧಿಕಾರಿಗಳಿಂದಲೋ, ಅಥವಾ ನಮ್ಮ ಸರ್ಕಾರಕ್ಕೆ ಅನುಮಾನ ಇದೆ. ನೀವು ಚುನಾವಣೆಯನ್ನು ನಡೆಸಬಾರದು ಎಂದು ಇರಬಹುದು. ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ ಹಾಗೆ ಮಾಡಿ ನೀವು ಕೇವಲ ನಿಮ್ಮ ಉದ್ದೇಶ ಏನು ? ಜೂನ್ 30 ನೇ ತಾರೀಖಿನೊಳಗೆ ಚುನಾವಣೆಯನ್ನು ನಡೆಸಬೇಕಾಗಿತ್ತು. ಸುಪ್ರೀಂ ಕೋರ್ಟಿಗೆ, ಇಲ್ಲ ನಾವು ಅಮೆಂಡ್‌ಮೆಂಟ್ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಹೊಸ ಪಂಚಾಯತ್‌ರಾಜ್ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ನಮಗೆ ಟೈಮ್ ಕೊಡಿ ಎಂದು ತರಾತುರಿಗೋಸ್ಕರ ಈ ರೀತಿ ಮಾಡುತ್ತಿದ್ದೀರೋ? ಮಾನ್ಯ ಏಕಾಂತಯ್ಯನವರ ಉದ್ದೇಶ ಏನು ? ನಾಳೆ ಯಾರಾದರೂ ಕೋರ್ಟಿಗೆ ಹೋಗಿ ಸ್ಟೇ ಮಾಡಿದರೆ ಇದೇ ಗೊಂದಲದಲ್ಲಿ ಒಂದು ವರ್ಷ, ಎರಡು ವರ್ಷ ಚುನಾವಣೆಯಾಗದೆ ಇದೇ ಗೊಂದಲ ಮುಂದುವರಿಯಬಹುದು. ಅದಕ್ಕೋಸ್ಕರ ಎರಡು ದಿವಸ ಟೈಮ್ ಕೊಡಿ, ಏನು ಕೊರತೆಗಳು, ಇವೆ. ನಾಳೆ ಯಾರಾದರೂ ಸುಪ್ರೀಂ ಕೋರ್ಟಿಗೆ, ಮತ್ತೊಂದಕ್ಕೆ ಹೋಗಿ ಸ್ಟೇ ಆಗದ ಹಾಗೆ ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ಚುನಾವಣೆಯಾಗಬೇಕು ಎಂದು ಹೇಳಿ ನಿಮಗಿಂತ ಹೆಚ್ಚು ಕಳಕಳಿ ಇರುವವರು ನಾವು. ನಿಮ್ಮ ಉದ್ದೇಶ್ಯ ಹೇಗಾದರೂ ಮಾಡಿ ಈ ಬಿಲ್ ಇಂಟ್ರಡ್ಯೂಸ್ ಮಾಡಿದೆವು ಎಂದು ಚುನಾವಣೆಯನ್ನು ಮಾಡುತ್ತೇವೆ ಎಂದು ಹೇಳಿ ಇನ್ನೊಂದೆರಡು ವರ್ಷ ಮುಂದೆ ತಳ್ಳುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಈ ಕೊರತೆಗಳಾಗಬಾರದು. ಈ ಕೊರತೆಗಳನ್ನು ನಾವು ನೋಡಿ ಸರ್ಕಾರಕ್ಕೆ ಸ್ವಲ್ಪ ಸರಿಪಡಿಸಿ ಈ ಬಿಲ್ ಇಂಟ್ರಡ್ಯೂಸ್ ಮಾಡಬೇಕು ಎಂದು ಸದುದ್ದೇಶದಿಂದ ಏಕಾಂತಯ್ಯನವರು ಹೇಳುತ್ತಿದ್ದಾರೆ. ಇಲ್ಲಿ ರೂಲ್ಸ್‌ಗಿಂತ ಕಾನೂನಿಗಿಂತ, ದಯಮಾಡಿ

ಎರಡು ದಿವಸ ಅವಕಾಶ ಸಿಕ್ಕಿದರೆ ನಾವು ನೋಡಿ ಎಕ್ಸ್‌ಪರ್ಟ್ ಕನ್‌ಸಲ್ಟ್ ಮಾಡಿ ಸರ್ಕಾರಕ್ಕೆ ಸಲಹೆ ಕೊಟ್ಟು ಕೊರತೆಗಳಿದ್ದರೆ ಸರಿಪಡಿಸಿಕೊಂಡು ಈ ಬಿಲ್ ಇಂಟ್ರಡ್ಯೂಸ್ ಮಾಡೋಣ ಎಂದು ಹೇಳುತ್ತಿದ್ದಾರೆ. ನಾವು ಬಿಲ್ ಪಾಸ್ ಮಾಡಿಸುವುದಕ್ಕೆ ರೆಡಿ ಇದ್ದೇವೆ, ಇಂಟ್ರಡ್ಯೂಸ್ ಮಾಡುವುದಕ್ಕೆ ನಮಗೆ ಒಪ್ಪಿಗೆ ಇದೆ. ದಯಮಾಡಿ ಇನ್ನು 8ನೇ ತಾರೀಖಿನವರೆಗೂ ಟೈಮ್ ಇದೆ. ದಯಮಾಡಿ ಏಕಾಂತಯ್ಯನವರು ಹೇಳಿದ ಹಾಗೆ ಎರಡು ದಿವಸದ ನಂತರ ಇಂಟ್ರಡ್ಯೂಸ್ ಮಾಡಿಸುವುದಕ್ಕೆ ಹೇಳಿ ಸ್ವಾಮಿ.

ಶ್ರೀ ಆರ್. ವಿ. ದೇಶಪಾಂಡೆ :- ಇಲ್ಲಿ ನಾವು ಪ್ರೆಸ್ಟೀಜ್ ಮೇಲೆ ನಿಂತಿಲ್ಲ . ಸರ್ಕಾರವೂ ಪ್ರೆಸ್ಟೀಜ್ ಮೇಲೆ ನಿಲ್ಲುವುದೂ ಬೇಡ. Let us not have bad precedents. ಈಗ ಸೆಕ್ಷನ್ 80 ಸಬ್ ಕ್ಲಾಸ್ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆರ್ಗ್ಯುಮೆಂಟ್ ಅವರ ದೃಷ್ಟಿಯಲ್ಲಿ ಸರಿ ಇರಬಹುದು. ಆದರೆ I have only opposed at the time of the introduction ಆ ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಆ ಲೆಜಿಸ್ಲೇಷನ್ ನನ್ನ ಕೈಯಲ್ಲಿ ಇಲ್ಲದಿದ್ದರೆ ನಾನು ಏನು ಅಬ್ಜೆಕ್ಷನ್ ರೈಜ್ ಮಾಡಬೇಕು? You have takn over my rights.

ಹಾಗಾಗಿ ಇಲ್ಲಿ ಬ್ಯಾಡ್ ಪ್ರಿಸಿಡೆಂಟ್ ಹಾಕುವುದು ಬೇಡ. ನಾವು ಪ್ರಿಸ್ಟೀಜ್ ಮೇಲೆ ಕುಳಿತಿಲ್ಲ. ಸರ್ಕಾರ ಕೂಡ ಕೂಡುವುದು ಬೇಡ. ಬಿಲ್ ಚರ್ಚೆಯಾಗಬೇಕು. ಚುನಾವಣೆ ಬೇರೆ ಆಗಬೇಕು ಎಂದು ನಮ್ಮ ಇಚ್ಛೆ. ಜೂನ್ ಒಳಗೆ ಆಗಬೇಕು ಎಂದು ಇದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು, ಬೇಕಾದರೆ ನಾಳೆ ಇಂಟ್ರಡ್ಯೂಸ್ ಮಾಡಲಿ ಎಂದು, ಅವರು ಒಂದು ಮಾತನ್ನು ಹೇಳಿದರು. ತಾವು ಹೇಳಿದಿರಿ.

ಹಾಗಾಗಿ ನಾನು ಏನು ಹೇಳುತ್ತೇನೆ. ಈ ಬಿಲ್ ಬೇಕಾದರೆ ನಾಳೆ ಇಂಟ್ರಡ್ಯೂಸ್ ಮಾಡಿ.ಹೇಗಾದರೂ ಕಾಪಿ ಕೊಟ್ಟಿದ್ದೀರಿ. ನಾಳೆ ಇಂಟ್ರಡ್ಯೂಸ್ ಆಗಲಿ. ಆದರಂತೆ ಸೋಮವಾರದಿಂದ ಚರ್ಚೆಗೆ ತೆಗೆದುಕೊಳ್ಳೋಣ. ಸಾಕಷ್ಟು ಚರ್ಚೆ ಮಾಡೋಣ. ಅದರಲ್ಲಿ ಏನು ಲೋಪದೋಷ ಕಾಣುತ್ತದೆ ಹೇಳುತ್ತೇವೆ.

ಅದು ಬೆಟರ್. ಅದರಲ್ಲಿ ಯಾವುದೇ ಪ್ರಿಸ್ಟೀಜ್ ಇಲ್ಲ. ಸದಸ್ಯರಿಗೂ ಅನುಕೂಲ ಮಾಡಿಕೊಡಬಹುದು. ಸೆಕ್ಷನ್ 80 ರ ಪ್ರಕಾರ ಸದಸ್ಯರಿಗೂ ಓದುವುದಕ್ಕೆ ಅನುಕೂಲ ಆಗುತ್ತದೆ. ಏಕೆಂದರೆಸೆಕ್ಷನ್ 80 ರ ಪ್ರಕಾರ ಏನು ಇದೆ. ಆ ಸ್ಟೇಜ್ ತಪ್ಪಿ ಹೋದರೆ ಪುನಃ ನಾಳೆ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ನಾಳೆ ಇಂಟ್ರಡ್ಯೂಸ್ ಮಾಡಲಿಕ್ಕೆ ಅವಕಾಶ ಕೊಡಿ. ನಾಳೆ ಆಗಲಿ.

Sri M.Y. Ghorpade : Sir, it is my duty to go on record properly on this issue. You are our speaker. We expect a ruling form you on the points raised on both the sides. I wish to re-iterate summarising what we have said. Bringing a bill is within the full competence of the Karanataka State as the Chief Minister pointed out.

Sri R. V. Deshepande: How? ನಾವು ಇವತ್ತು ಲೀಗಲ್ ಇಶ್ಯೂ ರೈಸ್ ಮಾಡಿಲ್ಲ. ಏಕೆಂದರೆ ಬಿಲ್ ನಮ್ಮ ಕೈಗೆ ಬಂದಿದೆ. ನಮ್ಮ ಕೈಗೆ ಬಿಲ್ ಬಂದಾಗ ಹೇಳುತ್ತೇವೆ ಕಾಂಪಿಟೆನ್ಸ್ ಇದೆಯೋ ಅಥವಾ ಇಲ್ಲವೋ ಎಂದು.

How can you say that it is compatent.

Sri M.Y.Ghorpade: Sir, we have heard from the whole of this morning.

I think we also deserve some protection at the hands of the Chair. let me not be interuppted often in the argument. Sir, it is within our legal competence.

There were no constitutional act when the previous Panchayat Raj bill was passed. Today we are not depending because of that Act the only thing is, we have to take care to see that it is not inconsistent to that act and it is our duty and responsibility of the State Government to see that there is nothing in that bill which might go against some central Act. That is why we have to send it to the President for his assent. If we think that there are some points which they should look into which might go counter to any central Act, that is the reason why we seek the president's assent. Even, that is not necessary. That depends on the legal wisdom of this Government. Therefore there is no question of raising an objection or questioning the right of this Government to bring such a bill. The only thing is about procedural aspect whether we have brought it before this House in the proper manner or is of Sir, it is very clear that Sri Ekantaiah has confused Rule 83 with 80, Rule 80 refers to introduced and see 83 does not refer to introduction. So, there is nothing in this ruling book nor in any ruling that you have given; which says that two days time has to be given before a bill is introduction. Therefore, both on technical grounds and grounds on legal competence, we are unassailable and therefore we should not be unnecessarily asked to postpone the introduction on grounds which do not stand the scrutiny of the House. I take all the points which members have said as to whether a particular section is good or bad. They are free to express when they debate on the bill and even after that there cannot be any bill or any enactment in this country or any other country which cannot be questioned at all in a court of law subsequently. Therefore, sir, when there is absolutely no doubt and there is no scope for any ambiguity I should not be asked to postpone the introduction of this bill.

ವೈ.ಕೆ. ರಾಮಯ್ಯ :- ನಿಯಮಾವಳಿ 80 ರಲ್ಲಿ ಅಥವಾ 83 ರಲ್ಲಿ ಮೊದಲೇ ಕಾಪಿ ಕೊಡಬೇಕು ಎನ್ನುವ ನಿಯಮ ಇಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮ ತಕರಾರು ವಿಧೇಯಕವನ್ನು ಮಂಡಿಸುವುದಕ್ಕಿಂತ ಮೊದಲು ನಮಗೆ ನಕಲುಗಳು ಬಂದಿಲ್ಲ ಅಷ್ಟೇ. ಬಹುಶಃ ಶಕ್‌ಟರ್ ಅಂಡ್ ಕೌಲನ್ನು ಹಿಂದೆ ಬಹಳ ಚೆನ್ನಾಗಿ ಓದಿಕೊಂಡು ಬರುತ್ತಿದ್ದಿರಿ, ನಾನು ಅಲ್ಲಿ ಕುಳಿತು ಕೊಂಡಿದ್ದಾಗ, ಈ ರಾತ್ರಿ ಕುಳಿತುಕೊಂಡು ಓದಿ. ಅಲ್ಲಿ ಏನು ಹೇಳುತ್ತಾರೆ. ಈ ನಕಲುಗಳನ್ನು ಮೊದಲೇ ಕೊಡಬೇಕು ಎಂದು ಅದು ರೂಲ್ಸ್‌ನಲ್ಲಿ ಇಲ್ಲ,

ಕಾಮೆಂಟರಿಯಲ್ಲಿ ಇದೆ. ಯಾವ ಸಂದರ್ಭದಲ್ಲಿ ಸ್ಪೀಕರ್ ರೂಲಿಂಗನ್ನು ಕೊಟ್ಟಿದ್ದಾರೆ ಎಂದರೆ competence to introduce the bill, we are not questioning. But nobody have the competence to introduce all bills.

ಎಲ್ಲಾ ವಿಧೇಯಕಗಳನ್ನು ಈ ಸದನದ ಮುಂದೆ ತರಲು ಆಗುವುದಿಲ್ಲ.

The bill which is in consistent with the provisions of the Constitution- For example, if you bring a bill which is inconsistent with the provisions of the Constitution, ನಮಗೆ ಮೊದಲೇ ಕೊಟ್ಟಿದ್ದರೆ, ಅಂಥ ಬಿಲ್ಲನ್ನು ನೀವು ಏನಾದರೂ ಜಾರಿಗೆ ತರಲು ಹೊರಟರೆ ನಮಗೆ ಅದನ್ನು ವಿರೋಧ ಮಾಡಲು ಅವಕಾಶ ಬೇಕು.

Please find out from your officers, Law Secretary and your experts,. The intention of the Speaker while giving the Ruling is to give an opportunity to the Member to examine whether the bill which is introduced by the Government is within the framework of the Constitution or not. ಈ ಬಿಲ್ಲನ್ನು ಇವತ್ತು ಇಂಟ್ರಡ್ಯೂಸ್ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಅಕಾಡೆಮಿಕ್ ಇಂಟರೆಸ್ಟ್‌ಗೆ ನನ್ನ ಕ್ಲಾರಿಫಿಕೇಷನ್ ಏನೆಂದರೆ: ಕಾನೂನಿಗೆ, ಸಂವಿಧಾನಕ್ಕೆ ವಿರೋಧವಾದಂಥ ಯಾವುದೋ ಒಂದು ಬಿಲ್ಲನ್ನು ನೀವು ತರುತ್ತೀರೆಂದು ಇಟ್ಟುಕೊಂಡರೆ, ಅದು ಸಂವಿಧಾನಕ್ಕೆ ವಿರೋಧವಾಗಿದೆ ಎಂದು ಕನಸನ್ನು ಕಾಣಲು ಸಾಧ್ಯವಾಗುತ್ತದೆಯೇ? ಅಥವಾ ಅದರ ಬಗ್ಗೆ ಕಾಡಿಗೆಯನ್ನು ಹಾಕಿಕೊಂಡು ನೋಡಲು ಆಗುತ್ತದೆಯೇ? ಅಥವಾ ಅದರ ಬಗ್ಗೆ ನಾವೇನಾದರೂ ಜ್ಞಾಪಿಸಿಕೊಳ್ಳಲು ಸಾಧ್ಯವಾಗುತ್ತದೆಯೇ? ಆದ್ದರಿಂದ ತಾವು ಎರಡು ದಿನದ ಮೊದಲು ಈ ಬಿಲ್ಲಿನ ಬಗ್ಗೆ ಕೊಟ್ಟಿದ್ದರೆ ನೀವು ತರತಕ್ಕಂಥ ಬಿಲ್ಲು ಸಂವಿಧಾನಾತ್ಮಕವಾಗಿದೆಯೇ Because you cannot introduce all the bills. You can introduce a Bill which contains the provisions which are in consistent with the provisions of the Constitution. For Example, if you are bringing a bill which is not in consistent with the provisions of the Constitution, are we not entitled to oppose the bill? ಆ ಒಂದು ದೃಷ್ಟಿಯಿಂದ ನಾವು ಆ ಒಂದು ತಕರಾರನ್ನು ತಂದಿದ್ದೇವೆ. ನೀವು ಅದನ್ನು ಬೇಗ ಜಾರಿಗೆ ತನ್ನಿ, ಜನಗಳ ಕೈಗೆ ಬೇಗ ಅಧಿಕಾರವನ್ನು ಕೊಡಿ, ಇದಕ್ಕೆ ಬೇಗ ಚುನಾವಣೆಯನ್ನು ಮಾಡಿ ಎಂದು ನಾವೇ ಕೇಳಿಕೊಳ್ಳುತ್ತಿದ್ದೇವೆ. ಅದಕ್ಕೆ ನಮ್ಮ ಕಡೆಯಿಂದ ಯಾರೂ ಕೂಡ ಆ್ಯಬ್‌ಸ್ಟೆಕಲ್ ಟ್ಯಾಕ್ಟೀಕ್ಸನ್ನು ಮಾಡುತ್ತಿಲ್ಲ. ನಮ್ಮ ಅಕಾಡೆಮಿಕ್ ಇಂಟರೆಸ್ಟ್ ಏನೆಂದರೆ, ಮುಖ್ಯಮಂತ್ರಿಗಳು ಇಲ್ಲಿ ವಾದ ಮಾಡುವುದನ್ನು ಎಷ್ಟೋ ಸಾರಿ ಕೇಳಿದ್ದೇನೆ. ಅಧ್ಯಕ್ಷರು ಮೊದಲೇ ಏಕೆ ಕೊಡಬೇಕು ಎನ್ನುವ ಬಗ್ಗೆ ರೂಲಿಂಗ್‌ನ್ನು ಕೊಟ್ಟಿದ್ದಾರೆಂದರೆ- ಯಾವುದಾದರೊಂದು ಬಿಲ್ಲನ್ನು ಸಂವಿಧಾನಕ್ಕೆ ವಿರೋಧವಾಗಿ ತರುವಂಥ ಸಂದರ್ಭದಲ್ಲಿ ಅದನ್ನು ವಿರೋಧ ಮಾಡಲು ನಮಗೆ ಅವಕಾಶ ಸಿಗಲಿ ಎನ್ನುವ ಉದ್ದೇಶದಿಂದ ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿ ಇಟ್ಟುಕೊಂಡು ಕೇಳುತ್ತಿದ್ದೇವೆ ಅಷ್ಟೇ.

ಶ್ರೀ ಆರ್. ವಿ. ದೇಶಪಾಂಡೆ:- ಅವರು ರೂಲ್ 83ನ್ನು ಓದಿದ್ದಾರೆ. Even if you introduce the bill today, It cannot come up for discussion before Monday. There should be clear two days ಆ ಬಿಲ್ಲಿನ ಇಂಟ್ರಡಕ್ಷನ್ ನಮ್ಮಿಂದ ಅಡ್ಡವಾಗಬೇಕೆಂದು ಇಲ್ಲ. ಇದರ ಬಗ್ಗೆ ಚರ್ಚೆಯಾಗಬೇಕೆಂದು ನಾವೇ ಹೇಳುತ್ತಿದ್ದೇವೆ.

We are more eager than the Government for discussion, more eager to hold the Elections. ನಾವೇ ಸರ್ಕಾರಕ್ಕೆ ಮಾಡಿ ಎಂದು ಚೆನ್ನತ್ತಿದ್ದೇವೆ. ಪ್ರಶ್ನೆ ಏನೆಂದರೆ: ನಮಗೆ ರೂಲ್ 83 ರ ಪ್ರಕಾರ ಈ ಬಿಲ್ಲನ್ನು ಇಂಟ್ರಡಕ್ಷನ್ ಸ್ಟೇಜಿಗೆ ಏನು ಚಾಲೆಂಜ್ ಮಾಡುವುದಕ್ಕೆ ಅಧಿಕಾರವಿದೆ. ಇದು ಇಂಟ್ರಡ್ಯೂಸ್ ಆದರೇನೆ ಸಿಕ್ಕುವುದು. ಆದರೆ, ಇದನ್ನು ಮಾಡಬೇಕಾದರೆ, ಟೆಕ್ನಿಕಲ್ ಆಗಿ ಅಥವಾ ಲೀಗಲ್ ಆಗಿ ತೊಂದರೆ ತಂದರೆ ತಾವು ಹೇಳಬಹುದು. ಹಾಗಾಗಿ, ಆ ಬಿಲ್ಲನ್ನು ಓದಿದರೆ ನಾವು ತಮಗೆ ಹೇಳಬಹುದು. ಈ ರೀತಿ ಓದಬೇಕಾದರೆ ಬಿಲ್ಲು ಮೊದಲು ನಮ್ಮ ಕೈಗೆ ಬರಬೇಕಾಗುತ್ತದೆ. ಇಲ್ಲದಿದ್ದರೆ ನಾವು ಹೇಗೆ ಓದಲು ಸಾಧ್ಯ? ಆದ್ದರಿಂದ ಬಿಲ್ಲು ಮೊದಲು ನಮ್ಮ ಕೈಗೆ ಬರಬೇಕಾಗುತ್ತದೆ.

Taken for granted, Mr. Ghorpade's argument, if the bill is introduced today, as per Rule 83, it cannot be discussed before Monday? It has to go up for discussion of Monday. You have to give two clear days. You yourself have admitted, if you introduce the bill today, it can be taken up for discussion only on Monday.

Sri. M.Y.Ghorpade: on What grounds, the Hon'ble Speaker is going to direct me to postpone the introduction?

Sri R.V. Deshapande: ತಾವು ರೂಲ್ 83 ಕೋಟ್ ಮಾಡಿ ಹೇಳಿದ್ದೀರಿ.

ಅದರ ಪ್ರಕಾರ ಎರಡು ದಿನ ಮೊದಲು ಬಿಲ್ಲನ್ನು ಕೊಡಬೇಕು. ನೀವು ಇವತ್ತು ಬಿಲ್ಲನ್ನು ಕೊಟ್ಟಿದ್ದೀರಿ. ಅಂದರೆ ಇಂದಿನಿಂದ ಎರಡು ದಿನದ ನಂತರ ಮಾಡಬೇಕು.

So, your bill has to come up for discussion only on Monday. Why you are standing on prestige? Give us time. We will study the bill. Constitutional problems are there. Suppose, if we feel something, we will raise it. Tomorrow when you introduce it, you convince or I will convince you. Otherwise, the bill can be taken up for consideration on Monday.

Sri. M. Veerappa Moily:- An impression should not go around that we have done some crime today. I have already quoted Rule 80 which is very clear as to the introduction stage. Notice need not be given. Two days' notice is not a requirement. I have already stated that even 7 days' notice, ಇದ್ದದ್ದನ್ನು ವೇವ್ ಮಾಡಿದಂಥ ಸಂದರ್ಭಗಳು ಇದೆ. ಯಾವಾಗಲೂ ಆ ಬಿಲ್ಲನ್ನು ಆ ದಿನವೇ ಕೊಡುವುದು. ಇದೇನು ಹೊಸದಲ್ಲ, Why all of a sudden the wisdom has prevailed upon us to *think* of these two days, seven days notice and all. Anyway, it is a good trend. Atleast we are reminded of the enough days to be given. Today sitting there you are reminding uswhich you have reminded Us sitting here.

(INTRODUCTION)

Sri M. Veerappa Moily:- It is good anyway. The symptom is very good.

(INTRODUCTION)

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಮುಖ್ಯಮಂತ್ರಿಗಳು ಕಾರ್ಯಭಾರದಿಂದ ಕಾನೂನನ್ನು ಮರೆಯುತ್ತಿದ್ದಾರೆ.

Sri M. Veerappa Moily :- I think I must congratulate you. ಎಲ್ಲಾ ನಮ್ಮ ವಿರೋಧ ಪಕ್ಷದ ನಾಯಕರನ್ನು, ಸದಸ್ಯರುಗಳನ್ನು ಖಂಡಿತವಾಗಿ ಅಭಿನಂದಿಸಬೇಕು. ನಮ್ಮ ರೂಲ್ ಪ್ರಕಾರ ನಡೆಯಬೇಕೆಂದು ತಾವು ಏನು ರಿಮೈಂಡ್ ಮಾಡಿದ್ದೀರಿ ಅದು ಯುಕ್ತವಾಗಿದೆ. ಇನ್ನು ಮುಂದೆ ಕೂಡ ಅದೇ ರೀತಿಯಲ್ಲಿ ನಡೆಯೋಣ. It is a good trend. The gesture is very good. Please see the Kaul and Shankder ಏಕೆಂದರೆ ಒಂದು ವಾಕ್ಯವನ್ನು ತೆಗೆದು ನಾವು ಬಹಳವಾಗಿ ವ್ಯಾಖ್ಯಾನ ಮಾಡುತ್ತಿದ್ದೇವೆ. Even it is not necessary, because the Rule is very specific . When the Rule is not specific and then it requires to be interpreted, then you have to go back to conventions.

ಪ್ರೊಸೀಜರ್ ಯಾವಾಗ ಹೋಗುತ್ತದೆ? ರೂಲ್ ಸ್ಪೆಸಿಫಿಕ್ ಆಗಿ ಇಲ್ಲದಿದ್ದಾಗ, ಆದರೆ ಇಲ್ಲಿ ರೂಲ್ ಸ್ಪೆಸಿಫಿಕ್ಕಾಗಿದೆ. Suppose, the rule is not specific, it is open for interpretation for orgument sake, what does page 498 say. It is better, I am permitted to read the entire rule 498 instead of one sentence :

"498 - Motion after introduction of bills:" So, it pertains to the Motion after introduction of the bill, not before.

(INTERRUPTIONS)

Sri. H. Ekanthaiah :- Please read page ....

(INTERRUPTIONS)

Sri M. Veerappa Moily :- We will meet your own arguments. Let us go even to the advanced stage.

"Motion after introduction of the bills ; After a Bill has been introduced, the Minister concerned may move any of the following bills into consideration Motion. Any Member may object to any such motion moved by the Minister if the copies of the Bill have not been made available, to the Members two days before the day on which the motion is made.

(i) Motion for Consideration (ii) Motion to refer it to the Selection Committee. (iii) Motion to refer to the Joint Committee. (iv) Motion for the bill to be circulated for eliciting public opinion.

Even there, two days is made and such objection prevails unless the Speaker allows the Motion to be made. Since the copies of the bills are

required to be circulated to the Members two days before its introduction, the next mation can technically be made on the day, the bill is introduced. However, by convention, the next motion in respect of the bill is not made of the same day on which the Bill is introduced.

when the copies of the Bill are circulated after introduction, namely in the case of financial bills (it is allowed in the parliament also) or secret bills or any other case where is has not been possible to circulate the copies too days before the introduction, the next motion after introduction can be made only when the copies of the bills have been in the hands of the Members for atleast two days."

That means, motion for introduction can be made only when the copies of the bills have been in the hands of the members for atleast two days.

"Where, however a request is made to the Speaker, by the Member in charge of the Bill for moving the next Motion (next motion, means after the introduction) earlier than two days after making available to Members thereof, the Speaker may in his discretion waive the period of notice and allow the Motion to be moved after taking all the facts into consideration."

It is an extreme case. We have not come to that stage. After the Motion for consideration, eventhough there is two days notice for introduction of the Bill, even for moving the Motion, you can waive the Motion, Even at the later stage; or at the considerations stage, or when two days notice is prescribed, even then notice could be made. That power has been very clearly stated. Of course, I don't say that it is a perfect method. However, it is done and it is backed up by precedent. It is backed up by the Ruling. So, I don't think any objection could be raised. Let us have the Bill introduced, tommorrow we can have full-fledged discussion so that we have full days' discussion. Even as matter of expediency it is better for the House to have the Bill introduced so that it can be taken up for consideration for a full day, with all seriousness.

Sri H.Ekanthaiah :- Hon'ble Chief Minister read out Page 498. I have not gone to that stage. I am still in 493. I refer to Foot-Note below page 493.

Prior to the issue of this direction in 1957, the practice was to circulate the bills to the Members after their introduction in the House although

a few copies were kept in the lobby at the time of the introduction for the information of the Members. Since the provisions existed under Rule 72 for any Member to oppose a motion".

ಇದು ಬಹಳ ಮುಖ್ಯವಾದುದು. ನಾನು ಹೇಳತಕ್ಕದ್ದು "It is similar to a provision under Rule 80 of these Rules, Since a provision existed under Rule 78 for any Member to Oppose Motion for leave to introduce a Bill, Demand was made now and then even in the Parliament, that the bills for Introduction should be circulated in advance, so that the Members might be aware of the contents of the Bill at the time of voting on the Motion for introduction in compliance with the wishes of the House, this direction was issued.

ಆ ಒಂದು ಸಂಪ್ರದಾಯವನ್ನು ಅನುಸರಿಸಿ ತಾವು ಸರ್ಕಾರದವರಿಗೆ ಸೂಚನೆ ಕೊಡಬೇಕು. ಇವತ್ತಿನ ದಿವಸ ಕೇಂದ್ರದ ಪಾರ್ಲಿಮೆಂಟರಿ ನಿಯಮ 72 ಕ್ಕನುಗುಣವಾಗಿ ಇಲ್ಲಿ 80 ನೇ ನಿಯಮ ಇದೆ. ಇದು ಮೊದಲು ಇರಲಿಲ್ಲ. ಅನಂತರ ಅವರು ತಿದ್ದುಪಡಿ ಮಾಡಿಕೊಂಡರು. ಅಲ್ಲಿ ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಅಪೋಸ್ ಮಾಡತಕ್ಕ ಹಕ್ಕನ್ನು ರೂಲ್ 72ರಲ್ಲಿ ಕನ್‌ಫರ್ಮ್ ಮಾಡಿಕೊಂಡರು. ಅದೇ ರೀತಿಯ ಹಕ್ಕನ್ನು ನಿಯಮ 80 ಪ್ರಕಾರ ತಾವು ನಮಗೆ ದಯ ಪಾಲಿಸುತ್ತಿದ್ದೀರಿ. ಆ ಹಕ್ಕನ್ನು ನಾವು ಚಲಾವಣೆ ಮಾಡಬೇಕಾದಾಗ ಇದರ ಒಂದು ತಿಳುವಳಿಕೆಯೇ ಬೇಡ ಎಂದು ಹೇಳತಕ್ಕದ್ದು ಸರಿಯೆ? ಇದನ್ನು ಕೊಟ್ಟಿದ್ದರೂ ಪರವಾಗಿಲ್ಲ, ಆ ಹಕ್ಕನ್ನು ಚಲಾವಣೆ ಮಾಡುವುದೇ ಬೇಡ, ನಾವು ಇದನ್ನು ಇಂಟ್ರಡ್ಯೂಸ್ ಮಾಡುತ್ತೇವೆಂದು ಸರ್ಕಾರದವರು ಹೇಳುವುದಾದರೆ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೆ? ಅಥವಾ ಜನತಂತ್ರ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡಬೇಕೆ ಅಥವಾ ಬೇಡವೇ? ನನಗೆ ಇದರಲ್ಲಿ ಯಾವುದೇ ಒಂದು ಪ್ರತಿಷ್ಠೆಯೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಂತಿಮವಾದ ಅಧಿಕಾರ ಮಾನ್ಯ ಅಧ್ಯಕ್ಷರಿಗೆ ಇದೆ ಎಂದು ಹೇಳಿದರು. ಇದನ್ನು ನಾನು ಒಪ್ಪಿಕೊಂಡಿದ್ದೇನೆ. ಇದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಅಂತಿಮ ಅಧಿಕಾರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸತಕ್ಕ ಅವಶ್ಯಕತೆ ಇದೆ. ಅದನ್ನು ಕೇವಲ ಸರ್ಕಾರದ ಪರವಾಗಿ ಉಪಯೋಗಿಸಬೇಕಾಗಿಲ್ಲ. ನಿಯಮ 93ನ್ನು ಗಮನದಲ್ಲಿಟ್ಟುಕೊಂಡು ವಿರೋಧಪಕ್ಷದವರಾದ ನಾವು ಸಕ್ರಿಯವಾಗಿ ಈ ಚರ್ಚೆಯಲ್ಲಿ ಭಾಗವಹಿಸಲು ಅನುಕೂಲವಾಗುವುದಕ್ಕೆ ನಮಗೆ ನಿಯಮ 80ನ್ನು ಏನು ಕೊಟ್ಟಿದ್ದೀರಿ ಅದನ್ನು ನಾವು ಚಲಾಯಿಸುವುದು ಬೇಡವೆ. ಇದನ್ನು ನಿಮಗೆ ನೆಪಮಾತ್ರಕ್ಕೆ ಕೊಟ್ಟಿದ್ದೇವೆ, ನೀವು ಇದನ್ನು ಚಲಾಯಿಸ ಬೇಕಾಗಿಲ್ಲ ಎಂದು ಹೇಳುವುದಾದರೆ ನನ್ನ ಅಭ್ಯಂತರವಿಲ್ಲ. ಇದಕ್ಕೆ ಸರ್ಕಾರ ಕೂಡ ಒಪ್ಪುವುದಾದರೆ ನನ್ನ ತಕರಾರು ಏನೂ ಇಲ್ಲ.

Sri M.Y. Ghorpade :- With due respects to what the Hon'ble Member Sri Ekanthaiah has said, you will kindly recollect yesterday, the Opposition was willing to co-operate with us to introduce the Bill. There was no such objection yesterday. I don't see how, overnight such an objection can come. We have discussed the point enough.

ಅಧ್ಯಕ್ಷರು:- ಈ ವಿಷಯದ ಬಗ್ಗೆ ಎರಡೂ ಕಡೆಯಿಂದ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಿನ್ನೆಲೆಯಲ್ಲಿ ನಾನು ಕನ್ವಿನ್ಸ್ ಆಗಿದ್ದೇನೆ. ಈಗ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಬಹುದು.

ಶ್ರೀ ಹೆಚ್. ಏಕಾಂತಯ್ಯ :- ಸರ್ಕಾರ ನಮ್ಮ ಬೇಡಿಕೆಗೆ ಒಪ್ಪದೇ ಇರುವುದರಿಂದ ....

Sri R.V. Deshpande :- We have no intentions to stop the Bill .....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಈ ಸರ್ಕಾರಕ್ಕೆ ರೂಲ್ಸ್, ರೆಗ್ಯುಲೇಷನ್ಸ್ ಏನೂ ಇಲ್ಲ. ಅಪೋಸಿಷನ್‌ನವರಿಗೆ ಯಾವುದಕ್ಕೂ ಅವಕಾಶವನ್ನು ಕೊಡದೇ ಇರುವುದರಿಂದ ನಾವು ಬಹಳ ವಿಷಾದದಿಂದ ಪ್ರೊಟೆಸ್ಟ್ ಮಾಡುತ್ತಿದ್ದೇವೆ. Government is taking it very casually.

(INTERRUPTIONS)

ಶ್ರೀ ಎಂ. ವೀರಪ್ಪ ಮೊಯ್ಲಿ :- ಈಗ ನಿಮ್ಮ ಬಣ್ಣ ಬಯಲಾಯಿತು. ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ಎದುರಿಸುವುದಕ್ಕೆ ನೀವು ಸಿದ್ಧರಾಗಿಲ್ಲ. You are running away from the Elections. You are running away from the people.

(ಗೊಂದಲ)

Sri M.Y. Ghorpade :- You stand exposed.

ಶ್ರೀ ಎಂ. ವೀರಪ್ಪ ಮೊಯ್ಲಿ :- ಚುನಾವಣೆಯನ್ನು ಎದುರಿಸುವುದಕ್ಕೆ ಧೈರ್ಯವಿಲ್ಲದೆ ಓಡಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ನಡೆಸುವುದಕ್ಕೆ ಸರ್ಕಾರಕ್ಕೆ ಕಳಕಳಿ ಇಲ್ಲ. ನೀತಿ ನಿಯಮಗಳನ್ನೆಲ್ಲಾ ಗಾಳಿಗೆ ತೂರುತ್ತಿದ್ದೀರಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳೂ ಸಭಾತ್ಯಾಗ ಮಾಡಿದರು.)

ಶ್ರೀ ಎಂ. ವೀರಪ್ಪಮೊಯಿಲಿ:- ವಿರೋಧಪಕ್ಷದ ನಾಯಕರಿಗೆ, ಸದಸ್ಯರಿಗೆ ಸಂವಿಧಾನದ ಆಚ್ಚನ್ನು ನಾವು ಇವತ್ತು ಏನು ಐತಿಹಾಸಿಕವಾಗಿ ಕೊಟ್ಟಿದ್ದೇವೆ, ಇದರಿಂದ ಜನತಂತ್ರಕ್ಕೆ ಸಂವಿಧಾನ ಬದ್ಧವಾಗಿ ಕೊಡತಕ್ಕ ಹಕ್ಕಿಗೆ, ನೀತಿಗೆ, ಪ್ರಜಾಪ್ರಭುತ್ವಕ್ಕೆ ವಿರೋಧವನ್ನು ವ್ಯಕ್ತಪಡಿಸಿ ಹೊರಗೆ ಹೋಗಿರತಕ್ಕದ್ದು ನಾಚಿಕೆಗೇಡು. ಆಡಳಿತ ವಿಕೇಂದ್ರಿಕರಣಕ್ಕೆ ವಿರೋಧವಾದ ನೀತಿಯನ್ನು ತೋರಿಸುವುದರೊಂದಿಗೆ ಇವರ ಆಷಾಢಭೂತಿತನವನ್ನು ತೋರಿಸಿದ್ದಾರೆಂಬುದನ್ನು ಈ ನಾಡಿನ ಜನತೆ ತಿಳಿದುಕೊಳ್ಳಬೇಕು. ಸಂವಿಧಾನಕ್ಕೆ ಬೆಂಬಲವಿಲ್ಲದಿರತಕ್ಕ ಸ್ವೇಚ್ಛಚಾರದ ಪ್ರವೃತ್ತಿಯನ್ನು ಹೊಂದಿರುವವರು ಇವರು ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾಡಿರುವಂಥ ಅಪಮಾನ ಎಂದು ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಸಂವಿಧಾನದ ಮೂಲಕ ರಾಜಕೀಯದ ಅಧಿಕಾರವನ್ನು ವಿಕೇಂದ್ರಿಕರಣ ಮಾಡುವ ಮೂಲಭೂತ ಪ್ರಜಾಪ್ರಭುತ್ವ ತತ್ವದಲ್ಲಿ ಇವರಿಗೆ ಯಾವುದೇ ವಿಶ್ವಾಸ ಇಲ್ಲವೆಂಬುದನ್ನು ಪ್ರತ್ಯಕ್ಷವಾಗಿ ಇವತ್ತು ತೋರಿಸಿಕೊಟ್ಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ:- ಅಧ್ಯಕ್ಷರೇ, ವಿಕೇಂದ್ರಿಕರಣ ಏನಿದೆ ಇದು ಕರ್ನಾಟಕದ ಜನತೆಯ ಜನ್ಮಸಿದ್ಧವಾದ ಹಕ್ಕು. ಇದು ಸರ್ಕಾರದ ಪವಿತ್ರವಾದಂಥ ಜವಾಬ್ದಾರಿಯಾಗಿದೆ. ತಾವು ಇದಕ್ಕೆ ಸಹಕಾರವನ್ನು ಕೊಟ್ಟರೂ ಸರಿ, ಕೊಡದಿದ್ದರೂ ಸರಿ, ನಮ್ಮ ಜವಾಬ್ದಾರಿಯನ್ನು ನಾವು ಸಂಪೂರ್ಣವಾಗಿ ನಿರ್ವಹಿಸುತ್ತೇವೆ.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕದ ಮಂಡನೆ

ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ 1993

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ವೈ. ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, 1993 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:-ಪ್ರಸ್ತಾಪ ಏನೆಂದರೆ ''1993ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-ಮಾನ್ಯ ಅಧ್ಯಕ್ಷರೇ, 1993 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-I

(ಸಭಾತ್ಯಾಗ ಮಾಡಿದ್ದ ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳು ಪುನಃ ಸಭೆಯೊಳಗೆ)

ಶ್ರೀ. ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕ 1993, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯ ಮಂತ್ರಿಗಳು ಈ ಸದಸನದಲ್ಲಿ ಇಬ್ಬಾರೆ,. ನಾವು ಅದನ್ನು ಒಪ್ಪಿಕೊಳ್ಳೋಣ, ಸದನದ ಮೇಲ್ಮನೆಯಲ್ಲಿರಬಹುದು, ಮೇಲ್ಮನೆಯಲ್ಲಿ ಕೆಲಸವಿರಬಹುದು, ಮತ್ತೊಂದು ಇರಬಹುದು. ಇವತ್ತು ಮುಂಚಾನೆ ನಾವು........

ಶ್ರೀ ಎ. ಕೆ. ಅನಂತ ಕೃಷ್ಣ:- ಮಾನ್ಯ ಅಧ್ಯಕ್ಷರೇ, ನನ್ನದೊಂದು point of the order ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಸಹಪಾಠಿಗಳು ಹೇಳಬೇಕಾದಷ್ಟನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅವರ ಸಹಪಾಠಿಗಳು ಹೇಳಬೇಕಾದ್ದನ್ನು ಸಹ ಸಾಕಷ್ಟು ಹೇಳಿದ್ದಾರೆ. ನಾನು ಕೂಡ ಹೇಳಿದ್ದೇನೆ. ಪುನಃ They don't have patience to hear.

(ಗೊಂದಲ)

ಅವರು ಹೇಳಿದ್ದನ್ನು ಗಂಟೆಗಟ್ಟಲೆ ನಾವು ಕೇಳಬೇಕು. ಅರ್ಧ ನಿಮಿಷ ಅವಕಾಶ ಕೊಡುವುದಿಲ್ಲ. They do not allow us even to open our mouth. we are very much pained.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ ನಾನು ಜಿಲ್ಲಾ ಪರಿಷತ್ತಿನ ಬಗ್ಗೆ ಮಾತನಾಡುತ್ತಾ ಇಲ್ಲ. ಅವರು ತಪ್ಪು ತಿಳಿದುಕೊಂಡಿರುತ್ತಾರೆ.

Sri.A.K.AnanthaKrishna:- Because he has a louder voice he wants to shout.

Sri. R. V. Deshapande :- you are also shouting.

Sri A.K. Ananthkrishna :- I am not shouting. I am on a point of Order. Speaker has allowed me. The point is very simple. You have given a ruling. Inspite of your having given the decision earlier, yet, you have allowed further discussion on the matter. We waited for it. Finally you have given your Ruling. The Bill has been introduced and they walked out of the House. I only request you to kindly ensure that no further discussion of the very subject matter is taken up. That's all.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

(1) ಆಶ್ರಯ ಯೋಜನೆಯಡಿಯಲ್ಲಿ ನಡೆದ ಅವ್ಯವಹಾರಕ್ಕೆ ಸಿ.ಒ.ಡಿ ವರದಿ ಹಾಗೂ ಗೃಹ ಮಂಡಳಿಯ ಅವ್ಯವಹಾರಕ್ಕೆ ತನಿಖೆಗೆ ಒತ್ತಾಯ.

ಶ್ರೀ ಆರ್. ವಿ. ದೇಶಪಾಂಡೆ :- ಈಗ ಯಾರು ಮಾತನಾಡುತ್ತಿದ್ದಾರೆ ? ಮಾನ್ಯ ಅನಂತ ಕೃಷ್ಣರವರಿಗೆ ಏನೋ ಮಾತನಾಡಬೇಕು, ಎಂದು ಅಂತ ಹೇಳಿ ಮಾತನಾಡುತ್ತಿದ್ದಾರೆ. ಅವರು ಸೀನಿಯರ್ ಮೆಂಬರ್ ಇದ್ದಾರೆ. ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಇದ್ದಿಲ್ಲ. ನಾವು ಇವತ 2-3 ವಿಷಯಗಳನ್ನು ಪ್ರಸ್ತಾಪ ಮಾಡಿದೆವು. ಒಂದು ಸಿ.ಓ.ಡಿ ಯವರು ಏನು ಒಂದು ವಿಷಯದ ಬಗ್ಗೆ ಎನ್‌ಕ್ವಯರಿ ಮಾಡುತ್ತಿದ್ದಾರೆ. ಅವರಿಂದ ಒಂದು ಇಂಟೀರಿಯಮ್ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಂಟೀರಿಯಮ್ ರಿಪೋರ್ಟ್ ಏನಿದೆ, ಏನಾಗಿದೆ ಅದನ್ನು ಹೇಳಬೇಕಾಗುತ್ತದೆಂದು ಒತ್ತಾಯ ಮಾಡುತ್ತಿದ್ದೇವೆ. ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏನು ನಡೆದಿದೆ, ಆ ವಿಷಯಗಳೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ಚೀಫ್ ಇಂಜಿನಿಯರವರನ್ನು ಅರೆಸ್ಟ್ ಮಾಡಿದ್ದೇವೆ. ಎಕ್ಸಿಕ್ಯೂಟೀವ್ ಇಂಜಿನಿಯರನ್ನು ಅರೆಸ್ಟ್ ಮಾಡಿದ್ದೇವೆ. ಮತ್ತೊಂದು ಮಾಡಿದ್ದೇವೆ. ಇಂಥವರು ಹಣವನ್ನು ಕೊಟ್ಟಿದ್ದಾರೆಂದು ಪೇಪರ್‌ನಲ್ಲಿ ಬಂದಿದೆ. ಅದರ ಬಗ್ಗೆ ತಾವು ಏನು ಮಾಡಿದಿರಿ ? ಸರ್ಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ? ಯಾರಿಗೆ ಅರೆಸ್ಟ್ ಮಾಡಿದರು ? ಯಾರನ್ನು ಸಸ್‌ಪೆಂಡ್ ಮಾಡಿದರು ? ಮುಂದೆ ಏನು ನಡೆಯುತ್ತಿದೆ ಅದನ್ನು ಅವರು ಹೇಳಬೇಕಾಗುತ್ತದೆ. ಆದರ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ವಿವರವಾಗಿ ಸ್ಟೇಟ್ ಮೆಂಟ್ ಕೊಡಬೇಕು. ಮತ್ತು ಆ ಪ್ರಿಲಿಮನರಿ ರಿಪೋರ್ಟ್‌ನಲ್ಲಿ ಏನು ಬಂದಿದೆ ಅದನ್ನು ಸಹ ಸಭೆಯ ಮುಂದೆ ಇಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ(ಶಿಕಾರಿ ಪುರ) :- ಮಾನ್ಯ ಅಧ್ಯಕ್ಷರೇ, ಸಿಓಡಿಯವರು ಇಂಟೀರಿಯಮ್ ರಿಪೋರ್ಟ್ ಕೊಟ್ಟಿದ್ದಾರೆ. ನಿನ್ನೆ ಇಡೀ ದಿವಸ ನಾವು ಧರಣೆ ಕುಳಿತಿದ್ದೇವೆ. ಆಶ್ರಯ ಯೋಜನೆಯ ಆಡಿಯಲ್ಲಿ ಏನು ಸಿಓಡಿ ಇಂಟೀರಿಯಮ್ ರಿಪೋರ್ಟ್ ತಮಗೆ ಕೊಟ್ಟಿದ್ದಾರೆ. ಅದನ್ನು ಹೌಸ್‌ನಲ್ಲಿ ಟೇಬಲ್ ಮಾಡಬೇಕು. ಅನೇಕ ವಿಷಯಗಳನ್ನು ಬಯಲು ಮಾಡಿದ್ದಾರೆ. ಇಡೀ ರಾಜ್ಯದ ಜನತೆ ಈ ಕಡೆ ನೋಡುತ್ತಿರುವಾಗ, ಕಡು ಬಡವರಿಗೆ ಮನೆ ಕೊಡುವ ವಿಷಯದಲ್ಲಿ ಅನ್ಯಾಯವಾಗಿದೆ. ಕೆಲವರನ್ನುಅರೆಸ್ಟ್ ಮಾಡಿದ್ದಾರೆ. ನಾವು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಸಿಓಡಿಯಿಂದ ವರದಿಯನ್ನು ತರಿಸಿದ್ದೀರಿ ತಪಿತಸ್ಥರಿಗೆ ಶಿಕ್ಷೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ. ಅನೇಕ ಅಧಿಕಾರಿಗಳನ್ನು ಬಂಧಿಸಿದ್ದೀರಿ. ನಾವು ಶ್ಲಾಘನೆ ಮಾಡುತ್ತೇವೆ. ನಿಮ್ಮ ಉದ್ದೇಶ ಏನಿದೆ ಅದನ್ನು ನಾವು ಮೆಚ್ಚುತ್ತೇವೆ. ಈವೊಂದು ಅವ್ಯವಹಾರದ ಹಿನ್ನಲೆಯಲ್ಲಿ ಗೃಹ ಮಂಡಳಿಯ ಅಧ್ಯಕ್ಷರನ್ನು ಏನು ನೇಮಕ ಮಾಡಿದ್ದೀರಿ ಆವೊತ್ತಿನಿಂದ ಇವತ್ತಿನವರೆಗೆ ನಡೆದಿರುವ ವ್ಯವಹಾರಗಳ ಬಗ್ಗೆ ನನ್ನ ಹತ್ತಿರ ಅನೇಕ ದಾಖಲೆಗಳಿವೆ. ಸಂಪೂರ್ಣವಾಗಿ ಅದರ ಬಗ್ಗೆ ಸಿಓಡಿ ತನಿಖೆ ಮಾಡಿಸಬೇಕೆನ್ನುವುದು ನಮ್ಮದು ಆಗ್ರಹವಿದೆ. ಅದಕ್ಕೋಸ್ಕರ ಸಿಓಡಿ ಇಂಟೀರಿಯಮ್ ವರದಿಯಲ್ಲಿ